(SRI RAMAKRISHNA HEGDE)

(*d*) Audit Report on the Accounts of the Mysore State Khadi and Village Industries Board and its units for 1961-62 and 1962-63,

under section 26 of the Mysore Khadi and Village Industries Act, 1956.

(*e*) The Mysore Industrial Areas Development Regulations, 1966 ; under section 42 of the Mysore Industrial Area Development Act, 1966.

Sri B. RACHAIAH (Minister for Revenue and Forests).—I beg to lay :

The Mysore Rent Control (Amendment) Rules, 1967 ;

Notification No. RD 79 GHR 65, dated 19th December, 1961 ;

under section 60 of the Mysore Rent Control Act, 1967.

Members' Representations

ಶ್ರೀ ಎಸ್. ಶಿವಪ್ಪ.—ದೇಶದ ಮುಂದೆ ಇರತಕ್ಕ ಪ್ರಾಮುಖ್ಯವಾದ ಪ್ರಶ್ನೆ ಇತ್ಯರ್ಥವಾಗದೆ ಬೇರೆ ವಿಷಯ ತೆಗೆದುಕೊಂಡು ಸಭೆಯ ಕಾರ್ಯಕಲಾಪ ನಡೆಸುವುದು ಬೇಡ.

ಅಧ್ಯಕ್ಷರು.—ಗೃಹ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದಾರೆ, ಅದು ಅಂಗೀಕಾರವಾಗಿದೆ, ಈ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂದು ಹೇಳಿದರು.

ಶ್ರೀ ಎಸ್. ಶಿವಪ್ಪ.—ಈ ದೇಶದಲ್ಲಿ ಗೃಹ ಮಂತ್ರಿಗಳು ಎನ್ನತಕ್ಕಂಥವರು ಒಬ್ಬರು ಇದ್ದಾರೆಯೇ ? ಅವರು ಏನೇನು ಕೆಲಸ ಮಾಡಿದ್ದಾರೆ ? ಮಧುಗಿರಿ ಪ್ರಕರಣವಾದ ಮೇಲೆ ಅವರು ರಾಜೀನಾಮೆ ಕೊಟ್ಟಿದ್ದೇನೆ ಎಂದು ಹೇಳಿ ಈ ಸಭೆಗೆ ಅವರು ಬರಲಿಲ್ಲ. ಅವರು ರಾಜೀನಾಮೆ ಕೊಟ್ಟಿದ್ದಾರೆಯೇ ? ಈ ಸಭೆಗೆ ಅದನ್ನು ತಿಳಿಸಲಾಗಿದೆಯೇ ?

Mr. SPEAKER.—On the Motion of Thanks, this matter can be raised.

ಶ್ರೀ ಎಚ್. ಸಿದ್ಧವೀರಪ್ಪ.—ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ ಮಾಡುವ ನಿರ್ಣಯ ಅದು ಸಾಮಾನ್ಯವಾಗಿ ಬರುತ್ತದೆ ಹೋಗುತ್ತದೆ. ಅದು ಅಷ್ಟು ಮುಖ್ಯವಲ್ಲ. ಇಂದು ದೇಶದಲ್ಲಿ ಅತಿ ಮುಖ್ಯವಾದ ವಿಷಯ ಇರುವುದು ಏನು ಅಂದರೆ ಕಳೆದ ಒಂದು ಒಂದೂವರೆ ತಿಂಗಳಿನಲ್ಲಿ ಏನೇನೋ ನಡೆದಿದೆ. ಅದು ಇನ್ನೂ ನಡೆಯುತ್ತಾ ಇದೆ. ದೇಶದ ಮೂಲೆ ಮೂಲೆಯಲ್ಲಿ ಏನು ನಡೆಯುತ್ತಿದೆ......

Mr. SPEAKER.—That could be raised in the Debate and I will call upon the Government to reply.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಅದಕ್ಕೆ ಅವಕಾಶ ಇದ್ದೇ ಇದೆ. ಆದರೆ ಮಧುಗಿರಿ ಪ್ರಕರಣವಾದ ಮೇಲೆ ಗೃಹ ಮಂತ್ರಿಗಳಾಗಿದ್ದ ಶ್ರೀಮಾನ್ ರಾಮರಾಯರು ರಾಜೀನಾಮೆ ಕೊಟ್ಟರು. ಅದಕ್ಕೆ ಮುಖ್ಯ ಮಂತ್ರಿಗಳಿಂದ ಒಂದು ಸಲಹೆ ಬಂತು. ಅವರು ರಾಜೀನಾಮೆ ಕೊಟ್ಟಿಲ್ಲ, ಇಲ್ಲಾ ಇಲ್ಲಾ ಎಂದು ಆ ಕಡೆ ಈ ಕಡೆ ಹಿಂದೆ ಮುಂದೆ ಏನೇನೋ ಮಾಡಿ ಅವರು ರಾಜೀನಾಮೆ ವಾಪಸ್ಸು ತೆಗೆದುಕೊಂಡಿದ್ದಾರೆ ಎಂಬ ಸಮಾಚಾರ ಬಂತು. ಆಮೇಲೆ ಅಲ್ಲಲ್ಲಿ ಗೋಳಿಬಾರ್ ನಡೆಯಿತು, ಹತ್ಯಾಕಂಡ ಶುರು ಆಯಿತು. ಇದಕ್ಕೆ ಕಾರಣರಾದವರು ಪೋಲೀಸಿನ ವರಿಗಿಂತ ಗೃಹ ಮಂತ್ರಿಗಳೇ ಮುಖ್ಯ ಕಾರಣರು. ಈ ರೀತಿ ಗೋಳೀಬಾರ್ ಆಗುವುದಕ್ಕೆ ಇವರು ಸರಿಯಾಗಿ ಕರ್ತವ್ಯ ಮಾಡದೇ ಇರುವುದೇ ಕಾರಣ. ಇವರ ಬೇಜವಾಬ್ದಾರಿಯಿಂದ ಆಗಬಾರದ ಅನಾಹುತ ಗೋಳೀಬಾರಿನಿಂದ ಆಗಿ ಅನೇಕ ನಿರಪರಾಧಿ ಜನರು ಪ್ರಾಣ ಕೊಟ್ಟರು. ಶ್ರೀಮಾನ್

ಕುಂಠಿಯುವರೇ, ಈಗ ಈ ಮಾತಿಗೆ ನೀವು ನಗುತ್ತಿದ್ದೀರಿ. ಆದರೆ ಒಂದು ಕಾಲ ಬರುತ್ತದೆ ನಿಮ್ಮನ್ನು ಆಳಿಸದೆ ನಾವು ಬಿಡುವುದಿಲ್ಲ. ಈ ರೀತಿಯಾಗಿ ದೇಶದಲ್ಲಿ ಮೂಲೆ ಮೂಲೆಯಲ್ಲಿ ಹತ್ಯಾಕಾಂಡ ನಡೆಯಿತು. ಇಂಥ ಹತ್ಯಾಕಾಂಡ ನಡೆಸಿದವರು ಗೃಹ ಮಂತ್ರಿಗಳು ಅವರು ಗೃಹಸ್ಥರೇ? ಅವರು ಸರಿಯಾಗಿ ಕೆಲಸ ಮಾಡದೇ ಅನ್ಯಾಯವಾಗಿದೆ. ಈಗ ಅವರು ರಾಜೀನಾಮೆ ಕೊಟ್ಟರು ಎಂದು ಹೇಳುತ್ತೀರಿ. ಎಂದು ರಾಜೀನಾಮೆ ಕೊಟ್ಟರು? ಮೊನ್ನೆಯ ದಿನ ಕೊಟ್ಟರೇ? ಅಸೆಂಬ್ಲಿ ಸೇರುವ ಹಿಂದಿನ ರಾತ್ರಿವರೆಗೆ ರಾಜೀನಾಮೆ ಅಂಗೀಕಾರವಾಗದೇ ಇರುವುದಕ್ಕೆ ಕಾರಣವೇನು? ಅವರಿಗೆ ಬರುವ ದುಡ್ಡು ಕಿತ್ತುಕೊಳ್ಳೋಣ ಎಂದು ಈ ರೀತಿ ಮಾಡಲಾಯಿತೇ? ಅದರ ಉದ್ದೇಶ ಏನು? ಇದನ್ನು ಸ್ಪಷ್ಟವಾಗಿ ಹೇಳಬೇಕು. ಮೋಷನ್ ಆಫ್ ಥ್ಯಾಂಕ್ಸ್ ನಿರ್ಣಯ ಬರಲಿ ಅದನ್ನು ಆಮೇಲೆ ನೋಡಿಕೊಳ್ಳೋಣ. ಇಂದು ದೇಶದಲ್ಲಿ ಏನು ನಡೆದಿದೆ ಎಷ್ಟು ಹಾಹಾಕಾರ ಇದೆ ಏನೇನು ನಡೆಯುತ್ತಾ ಇದೆ ಈ ವಿಚಾರ ಮೂಲಭೂತವಾದ ಪ್ರಶ್ನೆಯಾಗಿದೆ.

ಶ್ರೀ ರಾಮರಾಯರ ವಿಷಯವಾದ ಮೇಲೆ ಇನ್ನೊಂದು ವಿಷಯವಿದೆ, ಅದನ್ನು ತೆಗೆದುಕೊಳ್ಳುತ್ತೇವೆ. ಈಗ ಸಭೆಯ ಮುಂದೆ ನಾವು ತಂದಿರುವ ಪ್ರಶ್ನೆಯನ್ನು ಬಿಡಿಸಿದ ಮೇಲೆ ಸಭೆಯ ಕಾರ್ಯಕಲಾಪಗಳು ನಡೆಯಲಿ. ಹಾಗೆ ಮಾಡದೆ ನಾವು ಕೇಳಿದ್ದನ್ನೆಲ್ಲಾ ಹಾಗೆಯೇ ಬಿಟ್ಟುಕೊಂಡು ಹೋದರೆ ನಾವೂ ಸುಮ್ಮನೆ ಕುಳಿತುಕೊಳ್ಳುವುದಕ್ಕಾಗಿ ಇಲ್ಲಿ ಬಂದಿಲ್ಲ. ನಮ್ಮ ಕರ್ತವ್ಯವನ್ನು, ಏನೇ ಬರಲಿ, ಮಾಡಿಯೇ ತೀರಬೇಕು ಎನ್ನುವ ದೃಷ್ಟಿಯಿಂದಲೇ ನಾವು ನಿರ್ಧಾರ ಮಾಡಿಕೊಂಡು ಬಂದು ಕುಳಿತಿದ್ದೇವೆ. ಮೊದಲು ಈ ಪ್ರಶ್ನೆಯನ್ನು ಬಗೆಹರಿಸಿದ ಮೇಲೆ ಮತ್ತೊಂದು ಪ್ರಶ್ನೆಯನ್ನು ನಮ್ಮ ನಾಯಕರು ಎತ್ತುತ್ತಾರೆ.

Mr. SPEAKER.—Is the hon. Member moving the Motion or not moving ?

ಶ್ರೀ ಎಸ್. ಶಿವಪ್ಪ.—ಸರ್ಕಾರವೇ ಇರಲಿಲ್ಲವೆಂದು ಹೇಳುವಾಗ ಮೋಷನ್ ಆಫ್ ಥ್ಯಾಂಕ್ ಎಲ್ಲಿಂದ ಬರುತ್ತದೆ.? ದೇಶದಲ್ಲಿ ಅಲ್ಲೋಲ ಕಲ್ಲೋಲವಾಗಿ ಜನಗಳನ್ನೆಲ್ಲ ಕೊಲೆಮಾಡಿರುವಾಗ ಆ ಬಗ್ಗೆ ವಿವರಣೆ ನೀಡುವವರೆಗೂ ಇತರ ವಿಷಯಗಳನ್ನು ತೆಗೆದುಕೊಳ್ಳಕೂಡದು. ದೇಶದಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ಅವರು ಹೇಳಲಿ.

ಶ್ರೀ ಎಂ. ಎಸ್. ಕೃಷ್ಣನ್.—ಶ್ರೀಮಾನ್ ಶಿವಪ್ಪನವರು ಮತ್ತು ಮಾನ್ಯ ಸಿದ್ದವೀರಪ್ಪನವರು ಏನು ಹೇಳಿದ್ದಾರೆ ಅದು ಗಹನವಾದುದು, ಬಹಳ ಮುಖ್ಯವಾದುದು. ನಮ್ಮ ರಾಜ್ಯದೊಳಗೆ ಮುಖ್ಯಮಂತ್ರಿಗಳು ಯಾರಿದ್ದಾರೆ, ಗೃಹ ಮಂತ್ರಿಗಳು ಯಾರು ಎನ್ನುವುದೇ ತಕರಾರಿಗೆ ಬಂದಿದೆ. ಗೃಹಮಂತ್ರಿಯವರು ಪತ್ತೆ ಇಲ್ಲ; ಅವರು ನಾಪತ್ತೆಯಾಗಿದ್ದಾರೆ. ಇನ್ನೊಂದು ಕಡೆ ಜನಗಳನ್ನು ಕೊಲ್ಲುತ್ತಿದ್ದಾರೆ. ಇದಕ್ಕೆ ಮೊದಲು ಸರ್ಕಾರದ ಕಡೆಯಿಂದ ಉತ್ತರ ಕೊಡಬೇಕು. ಆಮೇಲೆ ಮೋಷನ್ ಆಫ್ ಥ್ಯಾಂಕ್ಸ್ ತೆಗೆದುಕೊಳ್ಳಬಹುದು. ಬಹುಮತವಿದೆ, ಏನು ಮಾಡಿದರೂ ನಡೆಯುತ್ತದೆ ಎಂದು ಕೈ ಎತ್ತಿದರೆ ಏನು ಪ್ರಯೋಜನ, ಸ್ವಾಮಿ?

†ಶ್ರೀ ಎಚ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರಲ್ಲಿ ಒಂದು ವಿನಂತಿ. ಅದು ಏನೆಂದರೆ ವಿರೋಧಪಕ್ಷದ ನಾಯಕರು ಮತ್ತು ಶ್ರೀಮಾನ್ ಸಿದ್ದವೀರಪ್ಪನವರು ಎತ್ತಿದಂಥ ಪ್ರಶ್ನೆ. ವಿರೋಧ ಪಕ್ಷದ ಎಲ್ಲ ಸದಸ್ಯರಿಗೂ ವಿವಂಚನೆಯಾಗಿರತಕ್ಕ ಒಂದು ವಿಷಯವೆಂದರೆ ಕಳೆದ ಎರಡು ತಿಂಗಳಿನಿಂದಲೂ ಈ ರಾಜ್ಯದಲ್ಲಿ ಸರ್ಕಾರ ಇದೆಯೇ ಎನ್ನುವ ಪ್ರಶ್ನೆ. ಈಗ ವಿಧಾನ ಸಭೆ ಸೇರಿದೆ. ಗೃಹ ಮಂತ್ರಿಗಳು ಹಿಂದೆ ರಾಜೀನಾಮೆ ಕೊಟ್ಟಿದ್ದರು. ಅದನ್ನು ಒತ್ತಾಯದಿಂದ ಹಿಂದಕ್ಕೆ ಪಡೆದರು ಪುನಃ ಮೊನ್ನೆ ರಾಜೀನಾಮೆ ಕೊಟ್ಟಿದ್ದಾರೆ.

ಇನ್ನೊಂದು ವಿಷಯ ಮಾನ್ಯ ಶಿವಪ್ಪನವರು ಎತ್ತುತ್ತಾರೆಂದು ನಿರೀಕ್ಷೆ ಮಾಡಿದ್ದೆವು. ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ಒಂದು ದೊಡ್ಡ ಹುದ್ದೆ ಸಿಕ್ಕಿದೆ ಎನ್ನುವುದು ನಮಗೆ ಹಿಂದಿನ ಸಭೆಯಲ್ಲೇ ಗೊತ್ತಾಗಿತ್ತು. ಅವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾರೆ. ಅದು ಪೂರ್ತಿ ಕಾಲದ ಕೆಲಸ. ಇಡೀ ದೇಶದಲ್ಲೆಲ್ಲ ಓಡಾಟ ಮಾಡಬೇಕು. ಮುಖ್ಯಮಂತ್ರಿಗಳ ಕೆಲಸವೂ ಪೂರ್ತಿ ಕಾಲದ ಕೆಲಸ. ಆ ಹುದ್ದೆಯಲ್ಲಿ ಎಷ್ಟು ಕೆಲಸ ಮಾಡಿದರೂ ಕಡಿಮೆ. ಹೀಗಿರುವಾಗ ಮಾನ್ಯ ಶ್ರೀ ನಿಜಲಿಂಗಪ್ಪನವರ ಧೋರಣೆ ನಮಗೇಕೋ ಭಯವನ್ನುಂಟು ಮಾಡುತ್ತಿದೆ. ಮೊನ್ನೆ ಒಂದು ಹೇಳಿಕೆ ಕೊಟ್ಟು ತಿಪ್ಪೆ ಸಾರಿಸಿದ್ದಾರೆ, ನನ್ನ ಸಮಯ ನಾನು ತೆಗೆದುಕೊಳ್ಳುತ್ತೇನೆಂದು. ಹೋದ ಸಲ ಸಭೆಯಲ್ಲಿ ಈ ಪ್ರಶ್ನೆ ಬಂತು. ಇದು ನನ್ನ ಗೃಹಕೃತ್ಯ, ಯಾರನ್ನಾದರೂ ನಾಮಕರಣ ಮಾಡುತ್ತೇನೆ, ನನಗೆ ಬೇಕಾದ ಹಾಗೆ ಮಾಡುತ್ತೇನೆ ಎಂದು ಹೇಳಿದ ಹಾಗೆ ಇತ್ತು. ಇಷ್ಟು ಡೋಲಾಯಮಾನದಿಂದ, ಉಪೇಕ್ಷೆಯಿಂದ ಈ ವಿಷಯದಲ್ಲಿ ಅವರು ವರ್ತಿಸುವುದು ಸಾಧ್ಯವಿಲ್ಲ, ಹಾಗೆ ಅವರು

(ಶ್ರೀ ಎಸ್. ಗೋಪಾಲಗೌಡ)

ವರ್ತಿಸುವುದಕ್ಕೆ ನಾವು ಬಿಡುವುದಕ್ಕೂ ಸಾಧ್ಯವಿಲ್ಲ. ಇದು ಬಹಳ ಸ್ಪಷ್ಟವಾಗಿರತಕ್ಕ ವಿಷಯ. ಆದುದರಿಂದ ನಾನು ಒತ್ತಾಯಪೂರ್ವಕವಾಗಿ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಈಗ ಗೃಹಖಾತೆಯನ್ನು ಯಾರು ನಿರ್ವಹಿಸುತ್ತಿದ್ದಾರೆ? ಶ್ರೀಮಾನ್ ನಿಜಲಿಂಗಪ್ಪನವರು ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಮುಂದುವರಿಯುವುದಕ್ಕೆ ಇಷ್ಟಪಡುತ್ತಾರೆಯೇ ಅಥವಾ ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಮುಂದುವರಿಯುವುದಕ್ಕೆ ಇಷ್ಟಪಡುತ್ತಾರಯೇ ? ಇದನ್ನು ನಮಗೆ ತಿಳಿಸಬೇಕು. ಇದು ಗಂಭೀರವಾದ ವಿಷಯವಲ್ಲವೇ ? ಶ್ರೀಮಾನ್ ನಿಜಲಿಂಗಪ್ಪನವರ ಗೃಹಕೃತ್ಯದ ವಿಷಯ ಖಂಡಿತವಾಗಿಯೂ ಇದಲ್ಲ. ಇದು ರಾಜ್ಯಕ್ಕೆ ಸಂಬಂಧಪಟ್ಟ ವಿಷಯ, ವಿಧಾನ ಸಭೆಗೆ ಸಂಬಂಧಪಟ್ಟ ವಿಷಯ, ಚುನಾಯಿತ ಪ್ರತಿನಿಧಿಗಳಿಗೆ ಸಂಬಂಧಪಟ್ಟ ವಿಷಯ. ಇದನ್ನು ತಿರಸ್ಕಾರ ಭಾವದಿಂದ ನೋಡುವುದಕ್ಕೆ ಸಾಧ್ಯವಿಲ್ಲ. ಇದನ್ನು ತಾವು ಸ್ಪಷ್ಟಪಡಿಸಬೇಕು. ಸರಕಾರದ ಪರವಾಗಿ ಈ ವಿಷಯವನ್ನು ಧೈರ್ಯವಾಗಿ ತಿಳಿಸುವ ಶಕ್ತಿ ಯಾರಿಗಾದರೂ ಇದ್ದರೆ ಅವರು ಈ ಮಾನ್ಯ ಸಭೆಗೆ ಸರಿಯಾದ ವಿಚಾರವನ್ನು ತಿಳಿಸಬೇಕು, ಯಾರಾದರೂ ಜವಾಬ್ದಾರಿ ವಹಿಸಿಕೊಂಡು ಉತ್ತರ ಹೇಳಲು ಸಮರ್ಥರಾಗಿದ್ದರೆ ಇದಕ್ಕೆ ತಕ್ಕ ಉತ್ತರ ದಯಪಾಲಿಸಬೇಕು. ಯಾರೂ ಅಂಥವರಿಲ್ಲದಿದ್ದರೆ ಈ ವಿಚಾರವನ್ನು ತಮ್ಮ ನಾಯಕರಿಗೆ ತಿಳಿಸಿ ಉತ್ತರವನ್ನು ಪಡೆದು ತಿಳಿಸಬೇಕು ಎಂದು ಅಧ್ಯಕ್ಷರ ಮೂಲಕ ಸರಕಾರವನ್ನು ಕೇಳಿಕೊಳ್ಳುತ್ತೇನೆ.

2-00 P.M.

ಜೊತೆಗೆ ನನಗೆ ಗೊತ್ತಿರುವ ಹಾಗೆ ಗೃಹ ಖಾತೆ ಸಚಿವರು ಹಿಂದೆ ರಾಜಿನಾಮೆ ಕೊಟ್ಟನಂತರ ಅವರು ಯಾವ ಕೆಲಸ ಕಾರ್ಯವನ್ನೂ ಅವರ ಇಲಾಖೆಗೆ ಸಂಬಂಧಪಟ್ಟಂತೆ ನಿರ್ವಹಿಸಿರಲಿಲ್ಲ ಎಂದು ತಿಳಿದು ಬಂದಿದೆ, ಅವರ ಪರವಾಗಿ ಗೃಹಖಾತೆಯ ಕಾರ್ಯದರ್ಶಿಯವರು ಎಲ್ಲ ಕೆಲಸಗಳನ್ನೂ ನೋಡಿಕೊಂಡಿದ್ದಾರೆ, ಗೋಳಿಬಾರ್ ಮಾಡುವುದಕ್ಕೆ ಕೂಡ ಆರ್ಡರು ಮಾಡಿದ್ದಾರೆ ಎಂಬ ವರ್ತಮಾನವಿದೆ. ಇದು ನಿಜವೇ ? ಇದಕ್ಕೆ ಮಾನ್ಯ ಸಭೆಗೆ ಜವಾಬ್ದಾರಿಯುತವಾದ ಉತ್ತರ ಬೇಕು. ಈ ಸಂಬಂಧದಲ್ಲಿರುವ ಒಂದು ಸಂದೇಹವನ್ನು ಪರಿಹಾರಮಾಡಿ ಅಧ್ಯಕ್ಷರು ಮುಂದಿನ ಕಾರ್ಯಕಲಾಪಗಳಿಗೆ ಕೈ ಹಾಕಬೇಕು ಎಂದು ನಾನು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

† Sri S. S. SHETTAR (Hubli).—I rise to a point of order. Article 164 (2) of the Constitution says:

"The Council of Ministers shall be collectively responsible to the Legislative Assembly of the State"

I submit, Sri M. V. Rama Rao and Sri Nijalingappa stand on the same footing because the reasons that were disclosed in the resignation of Sri M. V. Rama Rao and the Chief Minister are the same--office bearers of the All India Congress. If Sri Rama Rao, on this account, can submit his resignation, why then the Chief Minister also cannot resign is the question. When the Governor has accepted the resignation of Sri Rama Rao, then, would it not be also a ground for the Chief Minister to submit his resignation ?

Then, Sir, there is another question that some two months before Sri Rama Rao had tendered resignation. He had not come to the Assembly also. I do not know if he had tendered resignation and if it is not recommended for acceptance. Then, how can he resume his office and whether he has any responsibility or no responsibility is the question to be considered now. It being a joint responsibility, the Madhugiri incident and the incidents which have very recently occurred are all incidents for which they are collectively responsible and collective responsibility cast upon them. So, the acceptance of resignation of Sri Rama Rao has rather shielded him from this particular responsibility.

The meagre ground is that he became the Secretary of the All-India Congress Committee and for that reason, his resignation is accepted; this is rather shielding him; otherwise, this House would have held him responsible for the recent occurrences and also the incident that happened in Madhugiri. So, I submit, under these circumstances the responsibility of this Ministry—the collective responsibility—is there. It is not a ase in which Sri Rama Rao alone can tender resignation and when he has tendered resignation without the knowledge of this House, that is also improper. Under these circumstances, whether Sri Rama-Rao could all of a sudden get out of this House and whether he could shirk his responsibility in this manner and whether the Chief Minister can recommend the acceptance of that resignation should be explained.

†Sri S. R. KANTHI.—The hon'ble members have raised two questions. One is that relating to the Home Minister's resignation. The Home Minister is not bound to give intimation to the House whether he is resigning or not. He has given his resignation and it has been accepted by the Governor. I do agree with Sri Shettar that there is individual and collective responsibility so far as the working of any department is concerned. We are not shirking any responsibility. We are here in a position to say what happens in the department. As regards the Chief Minister becoming the President of All-India Congress and remaining also as the Chief Minister of the State, there is nothing wrong. It may not be to the liking of the members of the Opposition. But the matter is, still he can remain as Chief Minister and also as President of the All-India Congress Committee. That is why I would request the hon'ble members not to pry into these things because these are things which the party in power, would look into. It is not a question concerning the entire House or the members of the Opposition. I request the hon'ble members to have patience. Things will shape themselves in a manner which will be in the best interests of the State.

† ಶ್ರೀ ಎಸ್. ಶಿವಪ್ಪ.— ಈ ದೇಶದ ಮುಖ್ಯ ಮಂತ್ರಿ ಪದವಿ ಈ ಸಭೆಗೆ ಜವಾಬ್ದಾರಿಯಾಗಿರತಕ್ಕ ಸ್ಥಾನ. ಈ ಮುಖ್ಯ ಮಂತ್ರಿ ಪದವಿಯನ್ನು ತಮ್ಮ ಪಕ್ಷದ ಅಧಿಕಾರಿಯು ಹಾಗೆ ಉಪಯೋಗ ಮಾಡಿಕೊಳ್ಳುತ್ತೇವೆ, ಆ ಹಕ್ಕು ನಮಗೆ ಇದೆ ಎಂದು ಏನು ಹೇಳುತ್ತಾ ಇದ್ದೀರಿ, ಆ ಹಕ್ಕು ನಿಮಗೆ ಇಲ್ಲ. ಇವತ್ತು ರಾಜ್ಯದ ಮುಖ್ಯಮಂತ್ರಿಗಳು ಯಾರಿದ್ದಾರೆ ಅವರಿಗೆ ನಾವು ಸಂಬಳ ಕೊಡುತ್ತಾ ಇದ್ದೇವೆಅವರಿಗೆ ಎಲ್ಲ ರೀತಿಯ ಅಲೋಯನ್ಸ್‌ಗಳನ್ನು ಕೊಡುತ್ತಾ ಇದ್ದೇವೆ. ಇವತ್ತು ಆ ಮುಖ್ಯ ಮಂತ್ರಿದೇಶದ ಜವಾಬ್ದಾರಿಯನ್ನು ಅಲಕ್ಷ್ಯ ಮಾಡಿ ತಮ್ಮ ಪಕ್ಷದ ಮುಂದುವರಿಕೆಗೆ ದೆಹಲಿಯಲ್ಲಿ ಕಾಲವನ್ನು ಕಳೆದರೆ ಮುಖ್ಯಮಂತ್ರಿಸ್ಥಾನದಲ್ಲಿರಲಿಕ್ಕೆ ಅವರು ಲಾಯಕ್ಕಲ್ಲ. ಅವರಿಗೆ ಅಂಥ ಹಕ್ಕೂ ಇಲ್ಲ. ಅವರನ್ನು ಈ ಸ್ಥಾನದಲ್ಲಿ ಇಡುವುದಕ್ಕೆ ಜನ ತಯಾರಾಗಿಲ್ಲ ಎಂದು ಹೇಳುವುದಕ್ಕೆ ನಾನು ನಿಂತಿದ್ದೇನೆ. ಮತ್ತುಮುಖ್ಯಮಂತ್ರಿ ಯಾರೇಆಗಿರಲಿ ಅವರು ಈ ಮುಖ್ಯಮಂತ್ರಿ ಕಚೇರಿಯನ್ನು ಕಾಂಗ್ರೆಸ್ ಕಚೇರಿಯನ್ನಾಗಿ ಮಾರ್ಪಾಡು ಮಾಡುವುದಕ್ಕೆ ಅವರಿಗೆ ಯಾವ್ಯಾವ ಹಕ್ಕು ಇಲ್ಲ ಎಂದು ಇವತ್ತು ಸ್ಪಷ್ಟಪಡಿಸುವುದಕ್ಕೆ ನಾನು ಈಗ ನಿಂತಿದ್ದೇನೆ. ಇವತ್ತು ಮುಖ್ಯಮಂತ್ರಿ ಕಚೇರಿಯೇನಿದೆ ಅದು ಕಾಂಗ್ರೆಸ್ ಕಚೇರಿಯಾಗಿದೆಯೋ ಇಲ್ಲವೇ ಎಂಬುದನ್ನು ನೀವೇ ಹೇಳಿ. ಕಾಂಗ್ರೆಸ್ ಕಚೇರಿಯಾಗಿದೆ ಎಂದು ಹೇಳಿ ನಾನು ರುಜುವಾತು ಕೊಡುತ್ತೇನೆ, ಅಲ್ಲ ಎಂದು ಶೃತಪಡಿಸಿದರೆ ನಾನು ರಾಜಿನಾಮೆ ಕೊಡುತ್ತೇನೆ ಕಾಂಗ್ರೆಸ್ ಕಚೇರಿ ಎಂದು ನಾನುಶೃತಪಡಿಸಿದರೆ ನೀವು ರಾಜಿನಾಮೆ ಕೊಡುತ್ತೀರಾ ಹೇಳಿ. ಬೇಕಾದರೆ ಮುಖ್ಯಮಂತ್ರಿಗಳ ಕಚೇರಿ ಇವತ್ತು ಕಾಂಗ್ರೆಸ್ ಕಚೇರಿಯಾಗಿದೆ ಎಂದು ಹೇಳಿ ಈಗಲೇ ನಾನು ಸಾಕ್ಷಿ ಕೊಡುತ್ತೇನೆ. ಏನು ಸ್ವಾಮಿ ಇದು ? ಇವತ್ತು ಈ ದೇಶದ ಮುಖ್ಯಮಂತ್ರಿ ಸ್ಥಾನವನ್ನು ತಮ್ಮ ಪಕ್ಷದ ಮುಂದುವರಿಕೆಗಾಗಿ ದುರುಪಯೋಗ ಮಾಡಿಕೊಳ್ಳುತ್ತಾ ಇದ್ದು ಈ ದೇಶದ ಪ್ರಜಾ

(ಶ್ರೀ ಎಸ್. ಶಿವಪ್ಪ)

ಪ್ರಭುತ್ವ ತತ್ವಕ್ಕೇ ತಿಲಾಂಜಲಿಯನ್ನು ಕೊಟ್ಟಿದ್ದೀರಿ. ಇದೇ ರತಹ ಬೇರೆ ದೇಶಗಳಲ್ಲಿ ನಡೆದಾಗ ಕಾಂಗ್ರೆಸ್‌ನವರು ಏನು ಮಾಡಿದ್ದಾರೆ ಎಂಬುದನ್ನು ನೋಡಿ. 1959ನೇ ಇಸವಿಯಲ್ಲಿ ಇದೇ ತರಹ ನಂಬೂದ್ರಿಪಾದ್‌ರವರ ಸರ್ಕಾರ ಕೇರಳದಲ್ಲಿ ಇದ್ದಾಗ ಅಲ್ಲಿಯ ರಾಜ್ಯಪಾಲರು ಏನು ಮಾಡಿದರು ? ಅಲ್ಲಿಯ ಸರ್ಕಾರ ತನ್ನ ಪಕ್ಷದ ಮುಂದುವರಿಕೆಗೆ ದೇಶದ ಅಧಿಕಾರವನ್ನು ದುರುಪಯೋಗಪಡಿಸಿ ಕೊಳ್ಳುತ್ತಾ ಇದೆ, ಆದ್ದರಿಂದ ಆ ಸರ್ಕಾರವನ್ನು ವಜಾ ಮಾಡಬೇಕೆಂದು ರಾಜ್ಯಪಾಲರು ರಾಷ್ಟ್ರಾಧ್ಯಕ್ಷರಿಗೆ ಶಿಫಾರಸುಮಾಡಿದ್ದಾರೆ. ಇವತ್ತು ಅದೇ ತರಹ ಪರಿಸ್ಥಿತಿ ಮೈಸೂರು ದೇಶದಲ್ಲಿ ಇದೆ. ನಿಮ್ಮ ಈ ಸರ್ಕಾರವನ್ನು ವಜಾ ಮಾಡತಕ್ಕ ಪರಿಸ್ಥಿತಿ ಇವತ್ತಿನದಿವಸ ಇದೆ. ಈ ಕೆಲಸವನ್ನು ರಾಜ್ಯಪಾಲರು ಮಾಡಬೇಕು ಇಲ್ಲದೆ ಇದ್ದರೆ ಇದನ್ನು ಜನ ಮಾಡುತ್ತಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಅಧ್ಯಕ್ಷರೇ, ಈಗ ತಾನೆ ಮಾತನಾಡಿದ ನನ್ನ ಸ್ನೇಹಿತರಾದ ಶ್ರೀಮಾನ್ ಶಿವಪ್ಪನವರು ನಮ್ಮ ರಾಜ್ಯದ ಮುಖ್ಯಮಂತ್ರಿಗಳ ಕಾಂಗ್ರೆಸ್ ಆಫೀಸಾಗಿದೆ ಎನ್ನತಕ್ಕ ಒಂದು ವಿಚಾರವನ್ನು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಒಂದಂಶವನ್ನು ಇಲ್ಲಿ ಈಗ ಸ್ಪಷ್ಟಪಡಿಸ ಬೇಕಾಗಿದೆ. ಅದೇನೆಂದರೆ—ಅವರು ತಮ್ಮ ದೊಡ್ಡ ಪ್ರವಾಸವನ್ನು ತಾರೀಖು 30-1-1968ರಿಂದ ತಾರೀಖು 7-2-1968ರವರೆಗೂ ಕೈಗೊಂಡು ಅವರು ಮೈಸೂರು ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಸಂಚಾರ ಮಾಡಿ ಅವರೀಗ ವಾಪಸ್ಸು ಬಂದಿದ್ದಾರೆ. ಅವರು ತಮ್ಮ ಪ್ರವಾಸವನ್ನು ಕೈಗೊಳ್ಳುವ ಮುನ್ನ ತಾರೀಖು 25-1-68ರಲ್ಲಿ ಅವರ ಟೂರಿನ ಪ್ರೋಗ್ರಾಮನ್ನು ಹೊರಡಿಸಿದ್ದಾರೆ. ಅದರಲ್ಲಿ ಹೀಗೆ ಪ್ರಕಟಣೆಯಾಗಿದೆ.—

> "Tour programme of the Chief Minister and President of the A.I.C.C. inside and outside State".

ಇಂತಹ ಒಂದು ಪ್ರೋಗ್ರಾಂ ಹೊರಟಿರುವುದು ಈ ವಿಧಾನ ಸೌಧದಿಂದಲೇ ಮತ್ತು ಮುಖ್ಯ ಮಂತ್ರಿಗಳ ಕಚೇರಿಯಿಂದಲೇ, ಈ ಪ್ರಕಟಣೆ ಹೊರಬಿದ್ದಿದೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಮಾನ್ಯ ನ್ಯಾಯಾಂಗ ಸಚಿವರು "there is nothing wrong' ಎಂದು ಹೇಳತಕ್ಕದ್ದು ಸರಿಯಿಲ್ಲ. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ಅಧಿಕಾರವನ್ನು ಹೇಗೆ ಉಪಯೋಗ ಮಾಡಿಕೊಳ್ಳುತ್ತಿದ್ದಾರೆಂಬುದನ್ನು ಅದು ಎತ್ತಿ ತೋರಿಸುತ್ತಿದೆ. ಈ ಹಿಂದೆ ಇದೇ ವಿಚಾರದಲ್ಲಿ ಮಾತನಾಡುತ್ತಾ ನಾನು ನನ್ನ ವೈಯಕ್ತಿಕಾಭಿಪ್ರಾಯದ ಪ್ರಕಾರ ಶ್ರೀಮಾನ್ ನಿಜಲಿಂಗಪ್ಪನವರು ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗೇ ಇರಬೇಕು,ಅವರು ಈ ಸ್ಥಾನದಲ್ಲೇ ಮುಂದುವರೆಯಬೇಕು ಅನ್ನುವುದು ನನ್ನಆಸೆಯಾಗಿತ್ತೆಂದು ಹೇಳಿದಾಗ, ಅವರು ನಮ್ಮನ್ನುಬಿಟ್ಟು ಹೋಗತಕ್ಕದ್ದು ನಮಗೆ ಒಂದು ವ್ಯಸನಕರವಾದ ಸಂಗತಿಯೆಂದು ನಾನು ತಿಳಿಸಿದಾಗ ಶ್ರೀಮಾನ್ ನಿಜಲಿಂಗಪ್ಪನವರು ಮಾತನಾಡುತ್ತಾ ನನ್ನ ಉದ್ದೇಶವೇ ಬೇರೆಯಾಗಿದ್ದರೂ ನಾನು ಆ ವಿಚಾರದಲ್ಲಿ ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದ್ದೇನೆಂದು ಅವರು ಹೇಳಿ ಆ ವಿಚಾರವನ್ನು ಮುಗಿಸಿದರು. ಅಲ್ಲದೆ ಈ ವಿಚಾರ ನಮ್ಮ ಗೃಹಕೃತ್ಯಕ್ಕೆ ಸಂಬಂಧಪಟ್ಟ ವಿಚಾರ, ಇಲ್ಲಿ ಎಲ್ಲವೂ ಸರಿಹೋಗುತ್ತೆ, ಈ ವಿಚಾರದಲ್ಲಿ ಬೇರೆಯವರು ಬಾಯಿ ಹಾಕಬೇಕಾಗಿಲ್ಲ. ನಾವು ನಾವೇ ಇದನ್ನು ಸರಿಪಡಿಸಿಕೊಳ್ಳುತ್ತೇವೆಂದೂ ಸಹ ಅವರು ಆ ದಿವಸ ಹೇಳಿದರು. ಇದು ಬಹಳ ಸ್ವಾರಸ್ಯವಾದ ವಿಚಾರ. ಇದನ್ನು ಅಧ್ಯಕ್ಷರು ಸ್ವಲ್ಪ ಸಾವಧಾನದಿಂದ ಕೇಳಬೇಕು. ಇದರ ಚರಿತ್ರೆ ಬಹಳ ಚೆನ್ನಾಗಿದೆ. ನಮ್ಮಲ್ಲಿ ಯಾರಾದರೂ ಕಥೆ ಬರೆಯತಕ್ಕವರಿದ್ದನೆ ನಮ್ಮ ಈಗಿನ ಮುಖ್ಯ ಮಂತ್ರಿಗಳು ಮುಖ್ಯ ಮಂತ್ರಿಗಳಾಗಿಯೂ ಮತ್ತು ಕಾಂಗ್ರೆಸ್ಸಿನ ಅಧ್ಯಕ್ಷರಾಗಿಯೂ ಯಾವ ರೀತಿ ಒಂದೇ ಸ್ಥಾನದಲ್ಲಿ ಇದ್ದುಕೊಂಡು ಅಧಿಕಾರದಲ್ಲಿ ಮುಂದುವರಿಯುತ್ತಿದ್ದಾರೆಂಬುದನ್ನು ಒಂದು ಕಥಾವಸ್ತುವಾಗಿ ಇಟ್ಟುಕೊಂಡು ಒಂದು ಕಥೆಯನ್ನು ಬರೆಯುವುದಾದರೆ ಮನುಷ್ಯನ ಆಸೆ ಆಕಾಂಕ್ಷೆಗಳು ಹೇಗೆ ಜೀವನದಲ್ಲಿ ಬೇರೂರುತ್ತವೆ ಎಂಬುದನ್ನು ಅದರಲ್ಲಿ ಎತ್ತಿ ತೋರಿಸಬಹುದು.

ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ತಾ॥ 1-12-1967 ರಲ್ಲಿ ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಅಖಿಲಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾದರು ಎಂದು ಒಂದು ಪ್ರಕಟಣೆ ಹೊರಟಿತು. ಆದರೆ ಅದೇ ಪತ್ರಿಕೆಯಲ್ಲಿ ಅಧ್ಯಕ್ಷಪದವಿಯಿಂದ ನಿವೃತ್ತಿಹೊಂದಿದ ಶ್ರೀ ಕಾಮರಾಜ್ ಅವರು ಶ್ರೀ ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಗಳಾಗಿ ಇದ್ದುಕೊಂಡು ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾಗಿರಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆಂಬ ವಿಚಾರವೂ ಪ್ರಕಟಣೆಯಾಗಿತ್ತು. ಅದಕ್ಕೆ ಹಿಂದೆ ಶ್ರೀ ಸಂಜೀವರೆಡ್ಡಿಯವರು ಅಧ್ಯಕ್ಷರಾದ ಕೂಡಲೆ ಅವರು ತಮ್ಮ ಮುಖ್ಯಮಂತ್ರಿಯ ಪದವಿಗೆ ರಾಜಿನಾಮೆ ಕೊಟ್ಟರು. ಕಾಂಗ್ರೆಸ್ ಅಧ್ಯಕ್ಷರ ಕೆಲಸ ಅಂದರೆ

ಅದರಲ್ಲೂ ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗತಕ್ಕವರಿಗೆ ದೇಶದ ಮೂಲೆ ಮೂಲೆಗಳಲ್ಲೆಲ್ಲಾ ಬಹಳ ಕೆಲಸಗಳಿರುತ್ತವೆ, ಅವರು ಹಿಮಾಚಲದಿಂದ ಕನ್ಯಾಕುಮಾರಿಯುವರೆಗೂ ಸಂಚಾರ ಮಾಡಬೇಕಾಗಿದೆ. ಅದು ಬಹಳ ದೊಡ್ಡ ಜವಾಬ್ದಾರಿಯ ಸ್ಥಾನ. ಆದುದರಿಂದ ಈ ಎರಡೂ ಹುದ್ದೆಗಳನ್ನೂ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಅನ್ನುವುದಾಗಿ ಶ್ರೀ ಕಾಮರಾಜ್ ಅವರು ಹೇಳಿದ್ದರು. ಆ ಸಮಯದಲ್ಲಿ ನಮ್ಮ ಮುಖ್ಯಮಂತ್ರಿಗಳು ತಮ್ಮ ಸ್ಥಾನವನ್ನು ಏಕಾಏಕಿ ಬಿಡುವುದಕ್ಕಾಗುವುದಿಲ್ಲ, ಅವರು ಸ್ವಲ್ಪಕಾಲವಿದ್ದು ಆ ನಂತರ ಆ ಸ್ಥಾನಕ್ಕೆ ಅವರು ರಾಜೀನಾಮೆ ಕೊಡಬಹುದೆಂದು ಪತ್ರಿಕೆಗಳಲ್ಲಿ ಪ್ರಕಟಣೆಗಳು ಬರುತ್ತಿದ್ದವು. ಇವರು ಕೇವಲ 3 ತಿಂಗಳು ಮಾತ್ರ ಇಲ್ಲಿ ಮುಖ್ಯ ಮಂತ್ರಿಗಳಾಗಿದ್ದು ನಂತರ ಇಲ್ಲಿಂದ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗುತ್ತಾರೆಂದು ತಾ|| 3-12-1967 ನೇ ಪತ್ರಿಕೆಯಲ್ಲಿ ಓದಿದೆ. ನಾನು ಈ ವಿಚಾರವನ್ನು ಓದಿದ್ದು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ. ಅದರಲ್ಲಿ ನಮ್ಮ ಮುಖ್ಯ ಮಂತ್ರಿಗಳು ಬೊಂಬಾಯಿನಲ್ಲಿ 1967 ನೇ ಡಿಸೆಂಬರ್ 2 ರಲ್ಲಿ ಹೇಳಿದ ವಿಚಾರ ಹೀಗಿತ್ತು :

> "Chief Minister Nijalingappa told newsmen here today that he intended to call a meeting of the Mysore Legislature Congress Party on December 7 to elect a new leader."

ಅದಾದನಂತರ ಜನವಾಣಿ ಪತ್ರಿಕೆಯಲ್ಲಿ ತಾ.|| 4-12-1967ರಲ್ಲಿ ಒಂದು ಪ್ರಕಟಣೆ ಬಂತು. ಅದರಲ್ಲಿ ನಮ್ಮ ಮುಖ್ಯ ಮಂತ್ರಿಗಳು ಡಿಸೆಂಬರ್ 17ರ ತನಕ ರಾಜೀನಾಮೆ ಕೊಡತಕ್ಕ ಸಂಭವ ಇಲ್ಲ, ಅಲ್ಲಿಯುವರೆಗೂ ಸಚಿವ ಮಂಡಲಿಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ ಎಂದು ಮುಖ್ಯ ಮಂತ್ರಿಗಳು ಹೇಳಿಕೆ ಹೊರಡಿಸಿದ್ದರು. ನನ್ನ ಸ್ನೇಹಿತರು ಶ್ರೀಮಾನ್ ಕಂಠಿಯವರು ಪತ್ರಿಕೆಯಲ್ಲಿ ಸುಳ್ಳು ಬಂದಿದೆ ಎಂದು ಹೇಳಿದರು. ಆದರೆ ಅವರು ಇದುವರೆಗೆ ಕಾಂಟ್ರಡಿಕ್ಟ್ ಮಾಡಲಿಲ್ಲ. ಅನೇಕ ಪತ್ರಿಕೆಗಳಿಂದ ಈ ವಿಷಯವನ್ನು ತಂದಿದ್ದರೂ ಯಾವುದನ್ನೂ ಕಾಂಟ್ರಡಿಕ್ಟ್ ಮಾಡಲಿಲ್ಲ. ಅವರೇ ನಮಗ ಪಬ್ಲಿಕ್ ಒಪೀನಿಯನ್ ಹೇಳುವವರಾಗಿರುತ್ತಾರೆ. ಅವರ ವಾಕ್ಯವನ್ನು ಅವರ ಮುಂದಿಟ್ಟು ಉದಹರಿಸಬೇಕಾಗಿದೆ. ಡೆಕ್ಕನ್ ಹೆರಾಲ್ಡ್ ಡಿಸೆಂಬರ್ 5, 1967ರಲ್ಲಿ ಈ ರೀತಿಯಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದು ಬಂದಿದೆ.

> "C. M. CONFIDENT ABOUT SMOOTH SUCCESSION
>
> Mr. Nijalingappa said the selection of the new leader of the Legislature Congress Party was not likely before the ensuing winter session of the Legislature concluded on December 16''.
>
> 'How can I do it now as I have to consult my friends and colleagues ?' he added.
>
> "There was no worry as 'things will adjust themselves smoothly.' Generally, the people in Mysore 'are not wrongly impulsive."

ಈ ರೀತಿಯಾಗಿ ಡಿಸೆಂಬರ್ 16ರಲ್ಲಿ ಒಂದು ಸಂದೇಶವನ್ನು ನಮಗೆ ಕೊಟ್ಟರು. ಆಮೇಲೆ 20-12-1967 ರಲ್ಲಿ ಇಲ್ಲಿರುವ ಭರತರು ಈ ಸಭೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ಇನ್ನು ಮುಂದೆ ಬರುವುದು ಲವ, ಕುಶರ ಕಾಲ. ಲವ ಕುಶರು ಶ್ರೀರಾಮನನ್ನು ಮರೆಯುವುದಿಲ್ಲ. ಕಡೆಯ ಪಕ್ಷ ಕೆಲವು ಸಂದರ್ಭಗಳಲ್ಲಿ ಭರತನನ್ನೂ ಜ್ಞಾಪಿಸಿಕೊಳ್ಳುತ್ತಾರೆಂದು. ಈಗಾಗಲೇ ರಾಮರ ಕಾಲ ಆಯಿತು. ಭರತನ ಕಾಲವೂ ಆಯಿತು, ಮುಂದೆ ಲವ, ಕುಶರ ಕಾಲ ಬರುತ್ತದೆ ಎಂಬುದಾಗಿಯೂ ಆ ಮಹನೀಯರು ಇಲ್ಲಿ ಹೇಳಿದರು.

ಇನ್ನು ಡೆಕ್ಕನ್ ಹೆರಾಲ್ಡ್ ಜನವರಿ 5, 1968 ರಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಯಾವ ರೀತಿ ಹೇಳಿದ್ದಾರೆಂಬುದು ಬಂದಿದೆ. ಅದು ಈ ರೀತಿ ಇದೆ :

> "NIJALINGAPPA WILL CONTINUE AS C.M. FOR ANOTHER MONTH
>
> It is not that any major hitch in the election of a new leader of the Mysore Legislature Congress Party is expected. The Chief Minister feels that this period is needed to ensure a smooth transition in his State."

(ಶ್ರೀ ಎಚ್. ಸಿದ್ದವೀರಪ್ಪ)

ಒಂದು ತಿಂಗಳ ಹಿಂದೆಯೇ ಆ ರೀತಿಯಾಗಿ ಅಪ್ಪಣೆ ಕೊಡಿಸಿದರು. ಶ್ರೀಮಾನ್ ಕಾಮರಾಜ್ ನಾಡರ್ ಅವರು ಏನು ಹೇಳಿದರು ಜನವರಿ 5ರಲ್ಲಿ ಅಂದರೆ, ಅವರು ನಮ್ಮಲ್ಲಿ ಇಲ್ಲ, ನಾನು ಅವರ ವಿಚಾರ ಹೇಳುವುದಿಲ್ಲ. ಎರಡರಲ್ಲೂ ಇರಬೇಡಿ ಅದರಿಂದ ದೇಶಕ್ಕೆ ಒಳ್ಳೆಯದಲ್ಲವೆಂದು ಹೇಳಿದರು.

ನಂತರ ಡೆಕ್ಕನ್ ಹೆರಾಲ್ಡ್ 13, 1968 ರಲ್ಲಿ ಇನ್ನೊಂದು ಮಾತನ್ನು ಹೇಳಿದೆ. ಅದು ಈ ರೀತಿ ಇದೆ :

"To continue as C.M. till March end.

Mr. Nijalingappa, Congress President, will remain as Chief Minister till the end of March.

He told Pressmen on Friday that he would be participating in the Budget Session of the Mysore Assembly, which is likely to commence in the second or third week of February and close by March end.

Mr. Nijalingappa added that he would announce the list of the nominated members of the Congress Working Committee in Delhi on January 17."

ಇನ್ನೊಂದು ವಿಷಯ. ಅದನ್ನೂ ಸಹ ಓದಿ ಹೇಳುತ್ತೇನೆ. ಇಂಡಿಯನ್ ಎಕ್ಸ್‌ಪ್ರೆಸ್ ಫೆಬ್ರವರಿ 6, 1968 ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೊಚ್ಚಿನ್‌ನಲ್ಲಿ ಒಂದು ಮಾತನ್ನು ಅಪ್ಪಣೆ ಕೊಡಿಸಿದುದು ಪ್ರಕಟವಾಗಿದೆ. ಅದು ಈ ರೀತಿ ಇದೆ:

"Mr. Nijalingappa who is also the Chief Minister of Mysore was asked when would it be possible for him to devote his entire attention to Congress work.

He said, 'I cannot say that now, for my own reasons. I am just thinking about it'.

ಆದ್ದರಿಂದ ಕಾಂಗ್ರೆಸ್ ಬಹಳವಾಗಿ ಬಿದ್ದುಹೋಗಿದೆ. ನೀವು ಪೂರ್ಣ ಕಾಲವನ್ನು ಅದಕ್ಕಾಗಿ ವಿನಿಯೋಗಮಾಡಬೇಕು. ಆ ರೀತಿ ಮಾಡದಿದ್ದರೆ ಕೆಲಸ ಸಾಗುವುದಿಲ್ಲವೆಂದು ಹೇಳಿದೆ.

ಇನ್ನು ಡೆಕನ್ ಹೆರಾಲ್ಡ್ ಫೆಬ್ರವರಿ 13, 1968ರಲ್ಲಿ ಒಂದು ವಿಷಯ ಪ್ರಕಟವಾಗಿದೆ. ಅದು ಬಹಳ ಮುಖ್ಯವಾದುದು. ಅದು ಈ ರೀತಿ ಇದೆ:

"No time set to choose New Leader.

It sets at rest all the previous statements; all the previous statements have been washed.

Chief Minister Sri Nijalingappa asserted in Bangalore on Tuesday that he would take his own time as to when he should lay down his office. 'I do not set any time limit,' he said".

ಒಂದು ವಾರ ಹೋಯಿತು, ಒಂದು ತಿಂಗಳು ಹೋಯಿತು, ಮೂರು ತಿಂಗಳೂ ಹೋಯಿತು. The Chief Minister who is also holding the Congress Presidentship, has replied to a press question, "If it is in the interest of the country, I will remain in both the offices! What is important is that the work should go on "*in this fashion*". To a question whether you are effecting any change in the State's leadership following your election as President, he replied, "I will take my own time and I do not set any time". He

further said if he has to continue as Chief Minister, "I will do so in the interest of the country. What is important is that work should go on". He, further, dismissed as 'absolutely false' the allegation that he had been charging the Mysore Government D.A. and T.A. when he went to New Delhi as Congress President. He has also said to a question he would maintain his duel role of Congress President and Mysore's Chief Minister as long as necessary if this was in the interests of the country and as long as it did not affect his duties in both the capacities.

Again on 18th February '68 we read in the Press that Mr. Kanthi too was in the ring.

Sri S. R. KANTHI.—On the 17th there was a Press Conference in New Delhi in connection with the 8th Centinery Celebrations of Basava-jayanthi. The Press members asked me whether I would contest. I definitely told them that I am outside the boxing ring. I have repeated this twice or thrice. In spite of that I am sorry to read in the Press that I am also contesting. At about 1·30 A.M. last night, my son came and told me my name has appeared in the Press. I am telling you that I am not contesting at all. This is my personal explanation.

Sri H. SIDDAVEERAPPA.—In view of the statement made by my friend Mr. Kanthi, I do not want to take it further.

ಶ್ರೀ ಎಸ್. ಗೋಪಾಲಗೌಡ.—ಆ ಬಾಕ್ಸಿಂಗ್ ರಿಂಗ್‌ನೊಳಗೆ ಹೋಗದೇ ಇರುವುದಕ್ಕೆ ಕಾರಣವೇನೆಂಬುದು ಗೊತ್ತಾಗಲಿಲ್ಲ.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಇದು ಆದಮೇಲೆ ಇವೊತ್ತಿನ ದಿವಸದ ಪ್ರಜಾವಾಣಿಯ ಪತ್ರಿಕೆಯಲ್ಲಿ ಧೂಬಾಣದಲ್ಲಿ ಕೆಲವು ವಿಷಯ ಬಂದಿದೆ. ಇದರ ಪರಿಣಾಮ ಆಡಳಿತದ ಮೇಲೆ ಏನಾಗಿದೆ ಎನ್ನತಕ್ಕ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಯಾರು ರಿಂಗ್‌ನಲ್ಲಿ ಇದ್ದಾರೋ ಏನೋ ಅದು ನಮಗೆ ಸಂಬಂಧವಿಲ್ಲ. ಈಗ ದೇಶದಲ್ಲಿ ಏನಾಗಿದೆ ಎಂದರೆ, ಜತ್ತಿಯವರು ಮುಖ್ಯಮಂತ್ರಿಗಳಾಗಬೇಕೆಂದು ಕೆಲವಾರು ಕಡೆ ನಡೆದಿವೆ. ಕಂಠಿಯವರು ಮುಖ್ಯಮಂತ್ರಿಗಳಾಬೇಕೆಂದು ಕೆಲವರ ಕಡೆ ನಡೆದಿವೆ. ರಾಚಯ್ಯನವರು ಮುಖ್ಯಮಂತ್ರಿಗಳಾಗಬೇಕೆಂದು ಕೆಲವರ ಕಡೆ ನಡೆದಿದೆ. ಆಮೇಲೆ ಆರ್. ಎಂ. ಪಾಟೀಲರು ಮುಖ್ಯಮಂತ್ರಿಗಳಾಗಬೇಕೆಂದು ಕೆಲವರ ಕಡೆ ನಡೆದಿದೆ. ಇದರಿಂದ ಆಡಳಿತದ ಮೇಲೆ ಒಂದು ದುಷ್ಪರಿಣಾಮ ಉಂಟಾಗುತ್ತದೆ ಎನ್ನುವ ವಿಚಾರದಲ್ಲಿ ಧೂಬಾಣದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. "ಪುರಸಭಾಧ್ಯಕ್ಷ ಶ್ರೀ ಜಿ. ಎಲ್. ನಲ್ಲೂರೇಗೌಡರು ಪುರಸಭಾ ಭವನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲರೇ...ಎಂದು ಸಂಬೋಧಿಸಿ ಸ್ವಾಗತ ಭಾಷಣ ಮಾಡಿದರು. ಈ ಮುನ್ನವೇ ಸೂಚಿಸಿದ್ದಂತೆ ಮೈಸೂರಿಗೆ ಹಂಗಾಮಿ ಮುಖ್ಯಮಂತ್ರಿ (ರಿಲೀವಿಂಗ್ ಸ್ಟೇಷನ್ ಮಾಸ್ಟರ್) ಆಗಿ ಆರ್. ಎಂ. ಪಾಟೀಲರನ್ನು ನೇಮಿಸಲಾಗುವುದೆಂಬ ವದಂತಿಗೆ ಮೇಲ್ಕಂಡ ಅದಲ್—ತೊದಲ್ ನುಡಿಯು ಸುದ್ದಿ ಸಮರ್ಥನೆ ಕೊಡುತ್ತದೆ, ಅಷ್ಟೆ" ಎಂದು ಹೇಳಿದ್ದಾರೆ. ಇದು ಪ್ರಜಾವಾಣಿ ಪತ್ರಿಕೆಯ ಧೂ ಬಾಣದಲ್ಲಿ ಬಂದಿದೆ ಇದನ್ನು ಮಾನ್ಯ ಸದಸ್ಯರೆಲ್ಲರೂ ಓದಿರಬಹುದು. ಆಮೇಲೆ ಹಾಗೆಯೇ ಮುಂದುವರೆದು "ಅಂದಹಾಗೆಯೇ ನಾಯಕ ಸ್ಪರ್ಧೆಯ ಪ್ರಸ್ತಾಪ ಬಂದಾಗ ತಾವೂ ಸ್ಪರ್ಧೆಯಲ್ಲಿರುವುದಾಗಿ ಪಾಟೀಲ್, ಜತ್ತಿ, ಕಂಠಿ, ಹೆಗ್ಡೆ, ರಾಚಯ್ಯ—ಇತ್ಯಾದಿ ಆರೇಳು ಹೆಸರುಗಳು ಪಟ್ಟಿಗೆ ಬಂದಿವೆ. ನಾಯಕ ನಿಜಲಿಂಗಪ್ಪನವರು ಬೇಗನೆ ತೀರ್ಮಾನ ಮಾಡದಿದ್ದರೆ ಇನ್ನೂ ಮೂರು ನಾಲ್ಕು ಸೇರಿಯಾವು, ಪಟ್ಟಿಯು ಹೀಗೆ ಬೆಳೆಯ ಹತ್ತಿದರೆ ಈ ಹಿಂದೆಯೇ ನಾವು ಸೂಚಿಸಿರುವಂತೆ ಮತ್ತು ಈಚೆಗೆ ಸಚಿವ ಹೆಗ್ಗಡೆಯವರು ಹೇಳಿರುವಂತೆ ನಿಜಲಿಂಗಪ್ಪನವರೇ ನಾಯಕರಾಗಿ ಮುಂದುವರಿಯಬೇಕಾದ ಅನಿವಾರ್ಯ ಒದಗಿ ಬಂದೀತೋ" ಏನೋ ಎಂದು ಹೇಳಿದ್ದಾರೆ. ಇರಲಿ ಬಹಳ ಸಂತೋಷ ಶ್ರೀಮಾನ್ ನಿಜಲಿಂಗಪ್ಪನವರಿಗೆ ಅಖಿಲಭಾರತದ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಇರಬೇಕೆಂದು ಆಶೆ ಇದೆ, ಮತ್ತು ಇಲ್ಲಿ ಮುಖ್ಯಮಂತ್ರಿಗಳಾಗಿಯೂ ಇರಬೇಕೆಂದು ಆಶೆ ಇದೆ. ಆದರೆ ಅದರಿಂದ ಏನಾಗಿದೆ ಎಂದರೆ ಇವರದು ಡಿಲ್ಲಿಯಲ್ಲಿ ಒಂದು ಕಾಲು ಇಲ್ಲಿ ಒಂದು ಕಾಲು ಇರುವುದರಿಂದ ರಾಜ್ಯದ

(ಶ್ರೀ ಎಚ್. ಸಿದ್ದವೀರಪ್ಪ)

ಆಡಳಿತ ಸರಿಯಾಗಿ ನಡೆಯುವುದಿಲ್ಲ. ಕಾಗದ ಪತ್ರಗಳ ವ್ಯವಹಾರ ಸರಿಯಾಗಿ ನಡೆಯುತ್ತಿಲ್ಲ. ಆಡಳಿತದ ಯಂತ್ರ ಸರಿಯಾಗಿ ನಡೆಯುತ್ತಿಲ್ಲ. ಈಗಾಗಲೇ ದೇಶದಲ್ಲಿ ಅನಾಯಕತ್ವ ಮತ್ತು ಅರಾಜಕತೆ ಒಂದು ರೂಪಾಯಿನಲ್ಲಿ 14 ಆಣೆ ಉಂಟಾಗಿದೆ. ಇನ್ನು ಎರಡಾಣೆ ಉಳಿದಿದೆ. ಅದನ್ನೂ ಕಳೆದು ಪ್ರಜಾಪ್ರಭುತ್ವಕ್ಕೆ ತಿಲಾಂಜಲಿಯನ್ನು ಕೊಡಬೇಕೆಂದು ಮಾಡಿದ್ದೀರಾ ? ಇವೊತ್ತು ಮೈಸೂರು ರಾಜ್ಯದಲ್ಲಿ ಆಡಳಿತ ಸರಿಯಾಗಿ ನಡೆಯುತ್ತಿಲ್ಲ. ಇನ್ನು ಒಂದು ವರ್ಷದ ಅವಧಿಯವರೆಗೆ ದೇಶದ ಆಗುಹೋಗುಗಳನ್ನು ಹೊರತಕ್ಕ ಈ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳು ಬಡ್ಜೆಟ್ಟನ್ನು ಈ ಸಭೆಯ ಮುಂದೆ ಇಡಬೇಕು. ಆದ್ದರಿಂದ ಈ ವರ್ಷದ ಬಡ್ಜೆಟ್ಟನ್ನು ಈ ಸಭೆಯ ಮುಂದೆ ಇಡತಕ್ಕವರು ಯಾರು ? ದೇಶದಲ್ಲಿ ಹಣಕಾಸಿನ ಪರಿಸ್ಥಿತಿ ಏನಾಗಿದೆ, ದೇಶದಲ್ಲಿ ಆಡಳಿತ ಸರಿಯಾಗಿ ನಡೆಯುತ್ತಿದೆಯೇ ? ಮುಖ್ಯ ಮಂತ್ರಿಗಳು ಹೀಗೆ ಕಣ್ಣು ಮುಚ್ಚಿ ಕುಳಿತುಕೊಂಡರೆ ಕಷ್ಟವಾಗುತ್ತದೆ. ಆದ್ದರಿಂದ ಅವರು ಇಲ್ಲಿ ಇರುತ್ತಾರೆಯೇ, ಅಥವಾ ಅಲ್ಲೇ ಇರುತ್ತಾರೆಯೇ, ಯಾವುದನ್ನು ಹೇಳಿ ಬಿಡಲಿ, ಇಲ್ಲವೇ ಎರಡರಲ್ಲೂ ಇರುತ್ತಾರೆಂಬುದುದನ್ನಾದರೂ ಅವರು ಹೇಳಿಬಿಡಲಿ. ಮುಂದೆ ಏನು ಮಾಡಬೇಕೆಂಬುದನ್ನು ನಾವು ಯೋಚನೆ ಮಾಡುತ್ತೇವೆ. ದಯವಿಟ್ಟು ಈ ಪ್ರಶ್ನೆಯನ್ನು ಬಗೆಹರಿಸಿ ಮುಂದಿನ ಪ್ರಶ್ನೆಯನ್ನು ತೆಗೆದುಕೊಳ್ಳಬೇಕು. ದೇಶದಲ್ಲಿ ಇಂದು ಇದು ಒಂದು ಬರ್ನಿಂಗ್ ಪ್ರಾಬ್ಲಮ್ ಆಗಿದೆ. ಮೈಸೂರು ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಇಲ್ಲ. ಹೇಳುವವರೂ ಇಲ್ಲ ಕೇಳುವವರೂ ಇಲ್ಲ. ಅನಾಯಕತ್ವದ ರಾಜ್ಯ ಎಂದು ಹೆಸರು ಬಂದಿದೆ ಆದ್ದರಿಂದ ಮುಖ ಬದಲಾಯಿಸಿದರೆ ಏನಾದರೂ ದೇಶದಲ್ಲಿ ಬದವಲಾಣೆಯಾಗಬಹುದು ಎನ್ನತಕ್ಕಂಥ ಆಶೆ ಜನಗಳಿಗೆ ಇದೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ಈ ದೇಶದ ಎರಡೂವರೆ ಕೋಟಿ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ರಕ್ಷಣೆ ಮಾಡತಕ್ಕ ಜವಾಬ್ದಾರಿಯನ್ನು ತಾವು ಹೊತ್ತಿದ್ದೀರಿ, ತಮ್ಮನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ, ನಮ್ಮೆಲ್ಲರ ಹಕ್ಕು ಬಾಧ್ಯತೆಗಳನ್ನು ತಾವು ರಕ್ಷಣೆ ಮಾಡಬೇಕು.

Mr. SPEAKER.—I do not think the matter need be pursued any further. What has been stated already is enough. Very important points have been raised. I am informing the House that I have called a meeting of the Business Advisory Committee today at 3 0' Clock, of which the Chief Minister is a member. I trust, he will attend. I will just talk it over.

2-30 P.M.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಒಂದೇ ಒಂದು ವಿಚಾರ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಕಂಠಿಯವರು ಮಾತನಾಡುತ್ತಾ ಇದರಲ್ಲಿ ಏನೂ ತಪ್ಪಿಲ್ಲವೆಂದು ಹೇಳಿದರು. ಮುಖ್ಯಮಂತ್ರಿಯಾಗಿರಲೂಬಹುದು ಮತ್ತು ಕಾಂಗ್ರೆಸ್ ಅಧ್ಯಕ್ಷರಾಗಿರಲೂಬಹುದು ಎಂದು ಅವರು ಹೇಳಿದರು. ಪತ್ರಿಕೆಯಲ್ಲಿ ಬಂದ ವರದಿಯ ಪ್ರಕಾರ ಮಾನ್ಯ ನಿಜಲಿಂಗಪ್ಪನವರೂ ಸಹ ಈ ರೀತಿ ಹೇಳಿದ್ದಾರೆ. ಇದು ಅಷ್ಟು ಸುಲಭವಲ್ಲವೆಂದು ತಮ್ಮ ಗಮನಕ್ಕೆ ತರುತ್ತೇನೆ. ಈಗ ಮಾನ್ಯ ನಿಜಲಿಂಗಪ್ಪನವರು ಒಂದು ಕಡೆ ಮುಖ್ಯ ಮಂತ್ರಿಯಾಗಿದ್ದಾರೆ, ಇನ್ನೊಂದು ಕಡೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಕಾಂಗ್ರೆಸ್ ಅಧ್ಯಕ್ಷರಾಗಿ ದೇಶಾದ್ಯಂತ ತಿರುಗಾಡುತ್ತಿದ್ದಾರೆ. ಮೊನ್ನೆ ಇವರು ಕೇರಳಕ್ಕೆ ಹೋಗಿದ್ದಾರೆ. ಅಲ್ಲಿ ಹೋಗಿ ಕೇರಳದ ಸರ್ಕಾರ ಉರುಳಿಸಬೇಕೆಂದು ಕರೆ ಕೊಟ್ಟಿದ್ದಾರೆ. ಅಲ್ಲಿ ಒಂದು ಕಾಂಗ್ರೆಸ್ಸೇತರ ಸರ್ಕಾರ ಇದ್ದುದನ್ನು ಉರುಳಿಸಬೇಕೆಂದೂ, ಅಲ್ಲಿರುವ ಮುಖ್ಯಮಂತ್ರಿಯನ್ನು ಉರುಳಿಸಬೇಕೆಂದೂ ಪ್ರಯತ್ನ ಮಾಡಿದ್ದಾರೆ. ಇದು ಪತ್ರಿಕೆಗಳಲ್ಲೂ ವರದಿಯಾಗಿದೆ. ಈ ಪ್ರಜಾಪ್ರಭುತ್ವದಲ್ಲಿ ಒಂದು ರಾಜ್ಯದ ಮುಖ್ಯಮಂತ್ರಿ ಇನ್ನೊಂದು ರಾಜ್ಯಕ್ಕೆ ಹೋಗಿ ಅಲ್ಲಿನ ಸರ್ಕಾರವನ್ನು ಉರುಳಿಸಲು ಪ್ರಯತ್ನ ಮಾಡುವುದು ಒಂದು ರಾಜ್ಯಕ್ಕೆ ಕಳಂಕ ತಂದ ಹಾಗೆ ಆಗುತ್ತದೆ. ಒಂದು ರಾಜ್ಯದ ಜನರಿಗೂ ಇನ್ನೊಂದು ರಾಜ್ಯದ ಜನರಿಗೂ ವೈಮನಸ್ಯ ತಿಕ್ಕಾಟ ತಂದಂತಾಗುತ್ತದೆ. ಈ ರೀತಿ ಮಾಡಿರುವುದು ಸರಿಯಲ್ಲ. ಈಗ ನಮ್ಮ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ಕಾಂಗ್ರೆಸ್ಸಿನಲ್ಲಿ ಎಡ ಗುಂಪು. ಇವರು (ನಿಜಲಿಂಗಪ್ಪನವರು) ಕಾಂಗ್ರೆಸಿನಲ್ಲಿ ಬಲ ಗುಂಪು. ಇವರನ್ನು ಏನಾದರೂ ತೆಗಳಿದರೆ ಸುಮ್ಮನಿರುತ್ತಾರೆಯೇ ? ಈ ದೃಷ್ಟಿಯಿಂದ ನೋಡಿದರೂ ಕೂಡ ಇದು ಒಂದು ಸಣ್ಣ ವಿಷಯವಲ್ಲ. ಒಂದು ಕಡೆ ಮುಖ್ಯಮಂತ್ರಿ

ಯಾಗಿರುವುದು, ಇನ್ನೊಂದು ಕಡೆ ಕಾಂಗ್ರೆಸ್ ಅಧ್ಯಕ್ಷರಾಗಿರುವುದು ಪ್ರಜಾಪ್ರಭುತ್ವದಲ್ಲಿ ಸರಿಯಲ್ಲ.

ಅದೇ ರೀತಿ ಹಿಂದಿಯ ವಿಚಾರದಲ್ಲಿ ಅವರು ಒಂದೊಂದು ಕಡೆ ಒಂದೊಂದು ರೀತಿ ಹೇಳುತ್ತಿದ್ದಾರೆ. ಒಂದು ಕಡೆ ಕಾಂಗ್ರೆಸ್ ಅಧ್ಯಕ್ಷರಾಗಿ, ಇನ್ನೊಂದು ಕಡೆ ಮುಖ್ಯಮಂತ್ರಿಯಾಗಿ ಮಾತಾಡುತ್ತಾರೆ.

ಆದ್ದರಿಂದ, ಮಾನ್ಯ ಸಿದ್ದವೀರಪ್ಪನವರು, ಹಾಗೂ ಮಾನ್ಯ ಗೋಪಾಲಗೌಡರು ಹೇಳಿದಂತೆ, ಈ ವಿಚಾರದಲ್ಲಿ ಈ ಮಾನ್ಯ ಸಭೆಗೆ ಒಂದು ತೀರ್ಪು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—Certain points have been mentioned. Hon'ble members are raising some other points and points that are specifically referred to are with regard to certain actions taken by the Prime Minister of India. They are also putting hypothetical question. I will deal with points which are not hypothetical.

†Sri K. H. PATIL.—The main point is, can the Chief Minister of a State who also happens to be the President of the Congress go to another place and say that Government be toppled ? What about the federal structure ? What about the relations between two States and can he be the Chief Minister and at the same time the President of the Congress ?

Mr. SPEAKER.—Mr. Gangadhar has invited my attention to rule 29. What is it that is in his mind ? He referred to some amendments and I will deal with his point at 3 O' Clock. The other points are so fixed that I do not know whether members want me to give a ruling without studying the subjects.

Sri K. H. PATIL.—In a democratic set up all the Ministers are strictly responsible to both the Houses of Legislature. Mr. Rama Rao being a thorough gentleman has observed the feelings of both the Opposition and the Congress and has realised that he has lost the confidence of this House, and therefore, he was right in sending his resignation in time and it was Mr. Nijalingappa who tried to retain the resignation for pretty long time and persuaded him by giving him another position in his own party about which we are not concerned. But after acceptance of another party position Mr. Rama Rao has done the right thing and as a responsible Minister he tendered the resignation again through the Chief Minister and the Chief Minister had no other go except recommending it to the Governor. Therefore Sir, the Chief Minister also accepted it in principle what Mr. Rama Rao has done is correct and therefore Sir, on the same plea Mr. Nijalingappa is also equally responsible for all acts and consequences to which Mr. Rama Rao has been responsible. If Mr. Rama Rao's resignation has been accepted and it is as good as saying that Mr. Nijalingappa also tendered his resignation. He has also lost the confidence of this Hon'ble House. Therefore Sir, the point is this. When Mr. Rama Rao's resignation has been accepted for the reasons known to them and as it has appeared in the Press for the reasons that he has been appointed General Secretary of the Congress Committee; for the reasons that he has got the condemnation and strong criticisms about the police actions in the State, the joint responsibility of Mr. Nijalingappa cannot be avoided. Therefore,

(SRI K. H. PATIL)

whether there is any moral or legal sanctity in his remaining in the Ministry is to be considered. Therefore, it was the bounden duty of the Chief Minister or Mr. Rama Rao to make a statement in this House as to what is behind it and what is the secret in accepting his resignation and recommending it to the Governor. On what basis the Governor has accepted this resignation ? This is my point.

Mr. SPEAKER.—I do not think it is in order and it may be a point for debate. Which rule is violated ?

Sri K. H. PATIL.—It is absolutely right for us in this House to hear from the Minister. He is not here.

Mr. SPEAKER.—The hon'ble member may raise a point of order when the Minister is present.

Sri K. H. PATIL.—The convention that has been followed up till now has been deliberately avoided. What is the convention that you have in your mind ? When a Minister resigns he will have to submit his statement to the House and the House should know what are the reasons on which he has submitted the resignation. Suppose the Chief Minister has been unable to discharge his duties properly and Mr. Rama Rao has resigned, then the whole Ministry has no place here. Therefore, Sir, I think I have a right to make this speech and get his statement.

Mr. SPEAKER.—Mr. Patil has got many more rights, I am not worried about them, but he should be accurate. He wants the House to believe that Mr. Rama Rao is a member of this House. I don't think I can call him a member of this House. He is a member of the other House.

Sri K. H. PATIL.—Mr. Nijalingappa should have come before this House and should have made a statement as to what made him to recommend to the Governor and to persuade Mr. Rama Rao to withdraw his resignation earlier . All these facts must be known to us, because they are subordinate to the Legislature ; they are paid servants and when they are paid out of Government's money, is it not their duty to submit their statement ?

Mr. SPEAKER.—The point propounded for the acceptance of the House by Hon'ble Member Sri Patil is that inasmuch as there is collective responsibility of the Council of Ministers as a unit, if one member of the Council resigns all the other Members of it are bound to make statements or it will amount to a Vote of no confidence in a Minister. If he resigned on any ground for which the entire Cabinet is responsible then the Cabinet must have no place here. We are not aware of the fact on which he has resigned.

The Member will kindly give it to me in writing mentioning what he has in his mind, so that I may uphold the convention and there may not be any point of order.

† Sri S. R. KANTHI.—I have very patiently heard the Hon'ble Members on the other side. I have also understood the sentiments on

the other side. I must say there is no duty cast upon the Opposition. The duty is cast on the party in power and it cats as it thinks best. I must also say that, so far as the present Chief Minister is concerned, he enjoys the confidence of the majority of this House.

MR. SPEAKER.—If the House likes to have Tea break, I shall adjourn the House for half an hour.

The House will now stand adjourned for half-an-hour.

The House rose at Forty Minutes past Two of the Clock to re-assemble at Ten Minutes past Three of the Clock.

The House re-assembled at Thirty Minutes past Three of the Clock.

[MR. DEPUTY SPEAKER in the Chair]

ಉಪಾಧ್ಯಕ್ಷರು.—ಶ್ರೀ ಕೆ. ಎಚ್. ಶ್ರೀನಿವಾಸ ಅವರು ನಿರ್ಣಯವನ್ನು ಮಂಡಿಸಲಿ

(ಶ್ರೀ ಕೆ. ಎಚ್. ಶ್ರೀನಿವಾಸ ಅವರು ನಿರ್ಣಯ ಮಂಡಿಸುವುದಕ್ಕೆ ಎದ್ದು ನಿಂತರು)

†ಶ್ರೀ ಎಸ್. ಶಿವಪ್ಪ.—ಸ್ವಾಮಿ, ಟೀ ಟೈಂನಲ್ಲಿ ಮುಖ್ಯ ಮಂತ್ರಿಗಳು ಬರುತ್ತಾರೆ, ಅವರೊಡನೆ ಚರ್ಚೆ ಮಾಡಿ ಏನು ತೀರ್ಮಾನ ಮಾಡುತ್ತೇವೆ ಅದನ್ನು ಸಭೆಗೆ ತಿಳಿಸುತ್ತೇವೆ ಎಂದು ಮಾನ್ಯ ಸ್ಪೀಕರರು ಹೇಳಿದರು. ಇದನ್ನು ಪ್ರಸ್ತಾಪ ಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಡಬೇಕು ಎಂದು ಕೇಳಿದ್ದೆವು. ರಾಜ್ಯಪಾಲರವರ ಭಾಷಣಕ್ಕೆ ವಂದನೆ ಅರ್ಪಿಸುವ ನಿರ್ಣಯ ಬರಲಿದೆ. ಈಗ ರಾಜ್ಯಪಾಲರವರ ಭಾಷಣ ನಮ್ಮ ಮುಂದೆ ಇದೆ. ರಾಜ್ಯಪಾಲರವರ ಭಾಷಣ ತಯಾರಾಗಿರತಕ್ಕಂಥದ್ದರಲ್ಲಿ ಸರಕಾರದ ನೀತಿ ಏನು, ಒಂದು ನೀತಿಯ ಪ್ರಣಾಲಿಕೆ ಏನು ಇರುತ್ತದೆಯೋ ಅದನ್ನು ಮುಖ್ಯ ಮಂತ್ರಿಗಳು ಮಂತ್ರಿ ಮಂಡಲದ ಪರವಾಗಿ ರಾಜ್ಯಪಾಲರ ಬಾಯಿಂದ ಈ ಸಭೆಗೆ ಅದನ್ನು ಅಪ್ಪಣೆ ಕೊಡಿಸುತ್ತಾರೆ. ಆದರೆ ಇಂದು ಮುಖ್ಯ ಮಂತ್ರಿಗಳ ಸ್ಥಾನದಲ್ಲಿ ಯಾರು ಇದ್ದಾರೆಯೋ ಅವರು ಮುಖ್ಯ ಮಂತ್ರಿಗಳೋ ಅಥವಾ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರೋ ಎನ್ನುವ ಈ ಪ್ರಶ್ನೆ ಮೊದಲು ಇತ್ಯರ್ಥವಾಗದೇ ಇರತಕ್ಕಂಥ ಒಂದು ಸಂದಿಗ್ಧ ಸಮಯದಲ್ಲಿ ವಂದನೆ ಅರ್ಪಿಸುವ ನಿರ್ಣಯ ಚರ್ಚೆ ಮಾಡುವುದರಿಂದ ಏನೂ ಪ್ರಯೋಜನವಿಲ್ಲ. ಆದುದರಿಂದ ಮುಖ್ಯ ಮಂತ್ರಿಗಳು ಮೊದಲು ಸಭೆಯ ಮುಂದೆ ಬಂದು ತಮ್ಮ ಸ್ಥಾನ ಮಾನದ ಬಗ್ಗೆ ಒಂದು ಸ್ಪಷ್ಟವಾದ ಹೇಳಿಕೆ ಕೊಡಬೇಕು. ಅವರು ಏನು ಮುಖ್ಯ ಮಂತ್ರಿಗಳಾಗಿ ಮುಂದುವರಿಯುತ್ತಾರೋ ಅಥವಾ ಕಾಂಗ್ರೆಸ್ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಳ್ಳುತ್ತಾರೋ ಎನ್ನುವುದರ ಬಗ್ಗೆ ಇಂದು ದೇಶದ ಜನತೆಯಲ್ಲಿ ಕಳವಳವುಂಟಾಗಿದೆ. ತಮ್ಮ ಸ್ಥಾನಮಾನದ ಬಗ್ಗೆ ಮುಖ್ಯ ಮಂತ್ರಿಗಳು ಒಂದು ಹೇಳಿಕೆ ಕೊಟ್ಟು ಸ್ಪಷ್ಟಪಡಿಸಬೇಕು. ಕಾಂಗ್ರೆಸ್ ಅಧ್ಯಕ್ಷರಾಗಿ ಮತ್ತು ಮುಖ್ಯ ಮಂತ್ರಿಗಳಾಗಿ ಅವರು ಏನು ಎರಡೂ ಕುದುರೆಯ ಮೇಲೆ ಸವಾರಿ ಮಾಡುತ್ತಾರೆಯೋ ಇದನ್ನು ಈ ಸಭೆಗೆ ಸ್ಪಷ್ಟವಾಗಿ ತಿಳಿಸಬೇಕು. ಯಾಕೆಂದರೆ ಈ ಸಭೆಗೆ ಕಳವಳ ಕುತೂಹಲ ಉಂಟಾಗಿದೆ. ಇದು ನಿವಾರಣೆಯಾಗದೆ ಚರ್ಚೆ ಮುಂದುವರಿಯುವುದರಿಂದ ಏನೂ ಪ್ರಯೋಜನವಿಲ್ಲ. ಸಭಾಪತಿಗಳು ಇವತ್ತಿನ ವಿರಾಮಕಾಲದಲ್ಲಿ ಇದನ್ನು ಚರ್ಚೆ ಮಾಡಿ ಒಂದು ತೀರ್ಮಾನ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಆಗ ಇದು ಚರ್ಚೆ ಆದಹಾಗೆ ಕಾಣಲಿಲ್ಲ. ಯಾಕೆಂದರೆ ಮುಖ್ಯ ಮಂತ್ರಿಗಳು ಅಲ್ಲಿ ಇರಲಿಲ್ಲ. ಆದುದರಿಂದ ಈ ವಿಷಯಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ನಾವು ಮುಂಚೆ ಎಲ್ಲಿ ಇದ್ದೆವೋ ಅಲ್ಲಿಯೇ ಇದ್ದೇವೆ. ಆದುದರಿಂದ ಮುಖ್ಯ ಮಂತ್ರಿಗಳು ಮೊದಲು ಹೇಳಿಕೆ ಕೊಡಬೇಕು. ಅವರನ್ನು ಕರೆಸಿ ಈ ವಿಚಾರ ಏನು ಎನ್ನುವುದನ್ನು ಸಭೆಗೆ ತಿಳಿಸಿದರೆ ಮುಂದೆ ವಂದನಾರ್ಪಣೆ ನಿರ್ಣಯ ಚರ್ಚೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅವರು ಹೇಳಿಕೆ ಕೊಡಲು ಈ ಸಭೆಗೆ ಬರಲಿ.

ಉಪಾಧ್ಯಕ್ಷರು.—ಈಗಾಗಲೇ ಮಾನ್ಯ ಸದಸ್ಯರ ಗಮನಕ್ಕೆ ಒಂದು ವಿಚಾರವನ್ನು ತರಲಾಗಿದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಆರೋಗ್ಯ ಸರಿಯಾಗಿಲ್ಲ. ಅವರು ನಾಳೆ ಸಭೆಗೆ ಬರುತ್ತಾರೆ. ಅವರು ಬಂದು ಹೇಳುವವರೆಗೆ ಕಾರ್ಯಕಲಾಪ ನಡೆಸಕೂಡದು ಎಂದು ಹೇಳುವುದು ಸರಿಯಲ್ಲ. ಅವರು ನಾಳೆ ಬಂದು ಹೇಳಿಕೆ ಕೊಡುತ್ತಾರೆ, ಅದುವರೆಗೆ ಸಭೆಯ ಮುಂದಿರುವ ಕಾರ್ಯಕಲಾಪ ನಡೆಯಲಿ.

(ಉಪಾಧ್ಯಕ್ಷರು)

ಶ್ರೀ ಕೆ. ಎಚ್. ಪಾಟೀಲ್.—ಅವರು ತಮ್ಮ ನಿಲುವೇ ಏನು ಎನ್ನುವುದನ್ನು ಬರೆದುಕಳಿಸಿ ಇನ್ನೊಬ್ಬ ಮಂತ್ರಿಗಳ ಮುಖಾಂತರ ತಿಳಿಸಿ ಈ ಸಭೆಗೆ ಗೌರವ ಸೂಚಿಸುವುದಕ್ಕಾಗಿ ಬರೆದು ಕಳಿಸಬೇಕಾಗಿತ್ತು. ರಾಜ್ಯಪಾಲರ ಭಾಷಣದಲ್ಲಿ ಇರತಕ್ಕ ವಿಷಯಗಳನ್ನು ಚರ್ಚೆ ಮಾಡುವಾಗ್ಗೆ ಈ ಸರಕಾರ ಹಿಂದಿನ ವರ್ಷ ಏನೇನು ಮಾಡಿದೆ ಮುಂದಿನ ವರ್ಷ ಏನು ಮಾಡಲಿವೆ ಎಂಬ ಅಂಶಗಳನ್ನು ವಿಚಾರ ಮಾಡಬೇಕಾಗಿದೆ. ಈ ಸಭೆಗೆ ಲೀಡರ್ ಇದ್ದಾರೆಯೋ ಇಲ್ಲವೇ ಎಂಬ ಸಂದಿಗ್ಧ ಪರಿಸ್ಥಿತಿ ಬಂದಿದೆ. ಇದನ್ನು ಮೊದಲು ತಿಳಿದುಕೊಳ್ಳುವುದು ಅತ್ಯಾವಶ್ಯಕವಾಗಿದೆ. ಈ ಬಗ್ಗೆ ಅವರು ತಮ್ಮ ನಿಲುವೆಯನ್ನು ಯಾರ ಮುಖಾಂತರವಾದರೂ ಬರೆದು ಕಳಿಸಿದ್ದರೆ ವಿಚಾರ ಮಾಡಬಹುದಾಗಿತ್ತು. ಇಂದು ಬರುವುದಕ್ಕೆ ಅವರಿಗೆ ಆಗುವುದಿಲ್ಲ ನಾಳೆ ಬರುವುಕ್ಕೆಆಗುವುದಿಲ್ಲ ಅಂದರೆ ಇಂಥ ಸಂಧಿಗ್ಧ ವಾತಾವರಣದಲ್ಲಿ ಚರ್ಚೆ ಮಾಡುವುದು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಶ್ರೀಮಾನ್ ಶಿವಪ್ಪನವರು ಮತ್ತು ಶ್ರೀಮಾನ್ ಸಿದ್ದವೀರಪ್ಪನವರು ಎತ್ತಿದ ವಿಷಯ ಬಹಳ ಪ್ರಾಮುಖ್ಯವಾದುದಾಗಿದೆ. ಈ ಸಭೆಯಲ್ಲಿ ಮುಖ್ಯ ಮಂತ್ರಿಗಳು ಇಲ್ಲದೇ ಇರುವ ಕಾಲಕ್ಕೆ ಚರ್ಚೆ ಮುಂದುವರಿಸುವುದು ಕಷ್ಟವಾಗಿದೆ. ಚರ್ಚೆ ಮುಂದುವರೆಸುವುದಕ್ಕೆ ಸಾಧ್ಯವಿಲ್ಲ. ಈ ಸಭೆಯಲ್ಲಿ ಚರ್ಚೆ ನಡೆದಾಗ್ಗ ಅವರು ಇಲ್ಲಿ ಕುಳಿತಿದ್ದರೆ ಉತ್ತರ ಕೊಡುವುದಕ್ಕೆ ಅವರಿಗೆ ಅನುಕೂಲವಾತ್ತದೆ ಈ ಒಂದು ವಿಷಯ ಸಭೆಯ ಗಮನಕ್ಕೆತರುತ್ತೇನೆ. ಮುಖ್ಯ ಮಂತ್ರಿಗಳು ವಹಿಸಿಕೊಂಡಿರುವ ಈ ಎರಡು ಸ್ಥಾನಗಳು ಪೂರ್ಣ ಕಾಲ ಕೆಲಸ ಮಾಡ ತಕ್ಕಂಥ ಪದವಿಗಳು ಆಗಿವೆ. ಈ ಎರಡೂ ಪದವಿಗಳನ್ನು ಅವರು ಏಕ ಕಾಲದಲ್ಲಿ ಅಲಂಕರಿಸಿ ಪೂರ್ಣಕಾಲ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ ಎಂಬ ವಿಚಾರ ನಿರ್ವಿವಾದವಾದುದು. ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡಬಹುದು ಅಥವಾ ಕಾಂಗ್ರೆಸ್ ಅಧ್ಯಕ್ಷರಾಗಿ ಕೆಲಸ ಮಾಡಬಹುದು. ಎರಡೂ ಪದವಿಗಳಲ್ಲಿ ಇದ್ದು ಕೆಲಸ ಮಾಡುವುದು ಕಷ್ಟ. ಪ್ರಜಾಪ್ರಭುತ್ವದಲ್ಲಿ ರಾಜಕೀಯ ಪಕ್ಷಗಳ ಕೆಲಸ ಮಾಡುವುದು ಸ್ವಾಭಾವಿಕವಾಗಿ ನಡಿಯುತ್ತದೆ. ಆದರೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾದವರು ಕೆಳಮಟ್ಟಕ್ಕೆ ಇಳಿಯಬಾರದು ಎಂದು ಬಹು ವಿನಯದಿಂದ ಸೂಚಿಸಲು ಇಷ್ಟಪಡುತ್ತೇನೆ. ಏತಕ್ಕೆಂದರೆ ಕಾಂಗ್ರೆಸ್ ಅಧ್ಯಕ್ಷರಾದವರಿಗೆ ಬೆಂಗಳೂರಿನಲ್ಲಿ ಕೆಲಸ ಇರುವುದಿಲ್ಲ. ಅವರು ದಿಲ್ಲಿಯಲ್ಲಿ ಇರಬೇಕಾಗುತ್ತದೆ. ಅವರು ಭಾರತ ದೇಶದಲ್ಲೆಲ್ಲಾ ಸಂಚಾರ ಮಾಡಬೇಕಾಗುತ್ತದೆ. ಕಾಂಗ್ರೆಸ್ ಪಕ್ಷ ಕುಸಿದುಹೋಗತಕ್ಕಂಥ ಸಮಯದಲ್ಲಿ ಈ ಸಂಸ್ಥೆಗೆ ಒಂದು ಭದ್ರ ಅಡಿಪಾಯ ಹಾಕಿ ಸಂಸ್ಥೆ ಕಟ್ಟತಕ್ಕಂಥ ಜವಾಬ್ದಾರಿ ಪರಿಸ್ಥಿತಿ ಇಂದು ಇದೆ. ಇಲ್ಲಿ ಕೂಡ ರಾಜ್ಯದಾಡಳಿತ ಸಡಿಲವಾಗಿ ಚೆನ್ನಾಗಿ ನಡೆಯುತ್ತಿಲ್ಲ ಎನ್ನುವುದು ಕೇಳಿ ಬರುತ್ತಿದೆ. ಆದುದರಿಂದ ಎರಡು ಪದವಿಗಳನ್ನು ಅಲಂಕರಿಸಿ ಕೆಲಸ ಮಾಡತಕ್ಕಂಥ ಕಾಲದಲ್ಲಿ ಯಾವ ಯಾವ ದಿವಸ ಎಷ್ಟೆಷ್ಟು ಗಂಟೆ ಮುಖ್ಯಮಂತ್ರಿಗಳಾಗಿ ಕೆಲಸ ಮಾಡುತ್ತಾರೆ, ಯಾವ ಯಾವ ದಿವಸ ಎಷ್ಟೆಷ್ಟು ಹೊತ್ತು ಅಧಕ್ಷ ಪದವಿ ಕೆಲಸ ಮಾಡುತ್ತಾರೆ ಎಂಬುದನ್ನು ನಿರ್ಧಾರ ಮಾಡುವುದಕ್ಕಾಗುವುದಿಲ್ಲ. ಒಂದು ವೇಳಾಪಟ್ಟಿ ತಯಾರ್ಮಾಡುವುದಕ್ಕೆ ಸಾಧ್ಯವಿಲ್ಲ. ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಕೆಲಸಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಮುಖ್ಯ ಮಂತ್ರಿಗಳಾಗಿ ಕೆಲಸ ಮಾಡುವ ಕಾಲದಲ್ಲಿ ಬೇರೆ ಕಡೆ ಅವರು ಗಮನ ಹರಿಸಿದರೆ ನಮ್ಮ ರಾಜ್ಯಕ್ಕೆ ನಷ್ಟವಾಗುತ್ತದೆಂಬ ದೃಷ್ಟಿಯಿಂದ ಹೇಳುತ್ತೇನೆ. ನಮ್ಮ ರಾಜ್ಯದ ಪ್ರಜೆಗಳಿಗೆ ಈಗಿನ ಕಷ್ಟ ಕಾಲದಲ್ಲಿ ತೊಂದರೆಯಾಗುತ್ತದೆ. ಭೇಟಿ ಮಾಡುವುದಕ್ಕೆ ಅವರು ಸಿಕ್ಕುವುದಿಲ್ಲ. ಇವರು ಅಧ್ಯಕ್ಷ ಪದವಿಯನ್ನು ಅಲಂಕರಿಸಿ ಎಷ್ಟು ದಿವಸ ದಿಲ್ಲಿಯಲ್ಲಿ ಇದ್ದರು ? ಎಷ್ಟು ದಿವಸ ಹೊರಗಡೆ ಪ್ರವಾಸ ಮಾಡುತ್ತಾರೆ ಇದರ ಲೆಕ್ಕ ತೆಗೆದುಕೊಂಡರೆ ಇದು ಗೊತ್ತಾಗುತ್ತದೆ. ಅವರು ಹೆಚ್ಚು ಕಾಲ ಅಧ್ಯಕ್ಷರ ಕೆಲಸಕ್ಕೆ ವಿನಿಯೋಗ ಮಾಡಬೇಕಾಗುತ್ತದೆ. ಆದುದರಿಂದ ಮುಖ್ಯ ಮಂತ್ರಿ ಕೆಲಸವನ್ನಾದರೂ ಬಿಟ್ಟು ಕೊಡಲಿ ಅಥವಾ ಅಲ್ಲಿ ಇರುವ ಪದವಿಯನ್ನಾದರೂ ಬಿಟ್ಟುಬಿಡಲಿ. ಈ ಬಗ್ಗೆ ಅವರು ತಕ್ಷಣ ತೀರ್ಮಾನ ತೆಗೆದುಕೊಂಡರೆ ಕಾಂಗ್ರೆಸ್ ಪಕ್ಷಕ್ಕೂ ಕ್ಷೇಮ ನಮ್ಮ ದೇಶಕ್ಕೂ ಕ್ಷೇಮ. ಎರಡೂ ಪದವಿಗಳಲ್ಲಿ ಮುಂದುವರೆಯುವುದಕ್ಕೆ ನಾವು ಅವಕಾಶ ಕೊಡುವುದಕ್ಕೆ ಸಾಧ್ಯವಿಲ್ಲ. ಇದು ನಮ್ಮ ರಾಜ್ಯದ ಜನತೆಯ ಸ್ಪಷ್ಟ ಅಭಿಪ್ರಾಯ ಆಗಿವೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಬಯಸುತ್ತೇನೆ. ಇಷ್ಟು ಸೂಚಿಸಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸ್ವಾಮಿ, ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್‌ನ ಅಧ್ಯಕ್ಷರಾಗಿ ನಮ್ಮ ನೆರೆಹೊರೆಯ ಪ್ರಾಂತಗಳಾದ ಮದ್ರಾಸ್ ಮತ್ತು ಕೇರಳಗಳಲ್ಲಿ ಕಾಂಗ್ರೆಸ್‌ಗೆ ವಿರೋಧವಾದ ಸರ್ಕಾರಗಳು ಇದ್ದಂಥ ಸಂದರ್ಭದಲ್ಲಿ, ಅಲ್ಲಿಗೆ ಹೋದಂಥ

ಸಂದರ್ಭದಲ್ಲಿ, ಕಾಂಗ್ರೆಸ್ ಅಧ್ಯಕ್ಷರಾಗಿ ಮಾತನಾಡುವಂಥ ಸಂದರ್ಭದಲ್ಲಿ ವಿರೋಧ ಪಕ್ಷದ ಸರ್ಕಾರವಿರುವಂಥ ರಾಜ್ಯಗಳಲ್ಲಿ ನಮ್ಮ ನೆರೆಹೊರೆಯ ಮೈತ್ರಿಗೆ ಧಕ್ಕೆ ಬರುವಂತೆ ಕೇರಳಕ್ಕೆ ಹೋದಾಗ್ಗೆ ಅಲ್ಲಿನ ಸರ್ಕಾರದ ವಿಚಾರದಲ್ಲಿ ಮತ್ತು ಮದ್ರಾಸ್ ಮುಖ್ಯ ಮಂತ್ರಿಗಳ ವಿಚಾರದಲ್ಲಿ ಅನೇಕ ಸಲ ಕಾಂಗ್ರೆಸ್ ಅಧ್ಯಕ್ಷರಾಗಿ ಟೀಕೆ ಮಾಡಿದ್ದಾರೆ. ಇದರಿಂದ ನಮ್ಮ ರಾಜ್ಯದ ನೆರೆಹೊರೆಯ ರಾಜ್ಯಗಳಲ್ಲಿ ಭಿನ್ನಾಭಿಪ್ರಾಯ ಬಂದು ನಮಗೆ ತೊಂದರೆಯಾಗುವುದಕ್ಕೆ ಅವಕಾಶವಿದೆ. ಅವರು ಹೊರ ರಾಜ್ಯಗಳಿಗೆ ಹೋದಾಗ, ಕೇರಳಕ್ಕೆ ಹೋಗಬೇಕಾದರೆ ಅಥವಾ ಬೇರೆ ರಾಜ್ಯಕ್ಕೆ ಹೋಗಬೇಕಾದರೆ ಮುಖ್ಯ ಮಂತ್ರಿಯಾಗಿ ಹೋದರೆೋ ಅಥವಾ ಕಾಂಗ್ರೆಸ್ ಅಧ್ಯಕ್ಷರಾಗಿ ಹೋದರೋ ಎನ್ನುವುದು ಗೊತ್ತಿಲ್ಲ. ಮುಖ್ಯ ಮಂತ್ರಿಗಳಾಗಿ ಹೋದರೆ ಸ್ಟೇಟ್ ಗೆಸ್ಟ್ ಆಗುತ್ತಾರೆ. ಕಾಂಗ್ರೆಸ್ ಅಧ್ಯಕ್ಷರಾಗಿ ಹೋದರೆ ಅವರನ್ನು ಯಾರು ಕೇಳುವುದಿಲ್ಲ. ಈ ದೃಷ್ಟಿಯಿಂದ ಅವರು ಮುಖ್ಯ ಮಂತ್ರಿಗಳಾಗಿ ಇರಬೇಕಾದರೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ಬಿಡಲೇಬೇಕು. ನಮಗೆ ಮೂಲತಃ ರಾಜ್ಯದ ಹಿತಾಸಕ್ತಿ ಮುಖ್ಯವಾದುದು, ಬಾಕಿಯದೆಲ್ಲ ಗೌಣ. ಈ ದೃಷ್ಟಿಯಿಂದ ಅವರು ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿರಬೇಕಾದರೆ ಮುಖ್ಯ ಮಂತ್ರಿ ಸ್ಥಾನವನ್ನು ಬಿಡಲೇಬೇಕು, ಮುಖ್ಯ ಮಂತ್ರಿಯಾಗಿರಬೇಕಾದರೆ ಕಾಂಗ್ರೆಸ್ಸಿನ ಅಧ್ಯಕ್ಷ ಸ್ಥಾನವನ್ನು ಬಿಡಬೇಕು. ಎರಡೂ ದೋಣಿಗಳಲ್ಲಿ ಕಾಲನ್ನಿಟ್ಟುಕೊಂಡಿರುತ್ತೇನೆಂದು ಅವರು ಹೇಳುವುದಾದರೆ ಅದರಿಂದ ನಮ್ಮ ರಾಜ್ಯಕ್ಕೆ ಏನೂ ಪ್ರಯೋಜನವಿಲ್ಲ. ಅದ್ದರಿಂದ ಅವರು ಈ ಸಭೆಯ ನಾಯಕರಾಗಿ ಇರುತ್ತಾರೆಯೇ ಅಥವಾ ಕಾಂಗ್ರೆಸ್ ಅಧ್ಯಕ್ಷರಾಗಿರುತ್ತಾರೆಯೇ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಿದಮೇಲೆ ಮುಂದಿನ ಕಾರ್ಯಕ್ರಮವನ್ನು ನಡೆಸಬಹುದು.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಶ್ರೀಮಾನ್ ಶಿವಪ್ಪನವರೂ ಮತ್ತು ಸಿದ್ಧವೀರಪ್ಪನವರೂ ಹೇಳಿದಂಥ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿ ಮುಖ್ಯ ಮಂತ್ರಿಗಳಿಗೆ ಹುಷಾರಿಲ್ಲ, ಅವರು ನಾಳೆ ಬರಬಹುದು ಎಂದು ಹೇಳಿದಿರಿ. ನೀವು ಡಾಕ್ಟರಲ್ಲ. ನಾಳೆ ಸ್ವಲ್ಪ ಜೋರಾಗಬಹುದು, ಅಥವಾ ನಾಡಿದ್ದಿಗೆ ಹೋಗಬಹುದು, ಅವರು ಹುಷಾರಾಗಲು ಇನ್ನೂ ಒಂದು ತಿಂಗಳಾಗಬಹುದು, ಆರು ತಿಂಗಳಾಗಬಹುದು. ಆದ್ದರಿಂದ ಅವರು ನಾಳೆ ಬರುತ್ತಾರೆಂದು ತಾವು ಅಷ್ಟು ಸುಲಭವಾಗಿ ಹೇಳುವುದು ಸರಿಯಲ್ಲ. ಅವರು ನಾಳೆಯೇ ಬರಲಿ ಸಂತೋಷ. ಅವಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಖಾಯಿಲೆ ನೆಪ ಇಟ್ಟುಕೊಂಡು ಇವತ್ತು ತಪ್ಪಿಸಿಕೊಂಡವರು ನಾಳೆ ಬರುತ್ತಾರೆಂದು ಹೇಗೆ ಹೇಳುವುದಕ್ಕೆ ಸಾಧ್ಯ? ಖಾಯಿಲೆ ಡಾಕ್ಟರ ಕೈಯಲ್ಲಿಯೂ ಇಲ್ಲ, ತಮ್ಮ ಕೈಯಲ್ಲಿಯೂ ಇಲ್ಲ, ಕಾಂಗ್ರೆಸ್ ಪಕ್ಷದವರ ಕೈಯಲ್ಲಿಯೂ ಇಲ್ಲ. ಇದನ್ನು ಯಾರೂ ಹೇಳುವುದಕ್ಕಾಗುವುದಿಲ್ಲ. ಇದು ಬಹಳ ಅಗಾಧವಾದ ಪ್ರಶ್ನೆ.

ಶ್ರೀಮಾನ್ ನಿಜಲಿಂಗಪ್ಪನವರು ಕಾಂಗ್ರೆಸ್ ಅಧ್ಯಕ್ಷರಾಗಿ, ಮುಖ್ಯ ಮಂತ್ರಿಯವರಾಗಿ ಯಾವತ್ತು ಅಧಿಕಾರವನ್ನು ವಹಿಸಿಕೊಂಡರೋ ಅವತ್ತಿನಿಂದ ಈ ರಾಜ್ಯದಲ್ಲಿ ನಡೆದಿರತಕ್ಕ ಗಲಭೆಗಳಲ್ಲಿ ಕೋಳಿಯನ್ನು ಕೊಯ್ದ ಹಾಗೆ ಜನಗಳನ್ನು ಗುಂಡಿಟ್ಟು ಕೊಂದಿದ್ದಾರೆ. ಪೋಲೀಸಿನವರು ಬಂದೂಕ ತೆಗೆದುಕೊಂಡು ವಿದ್ಯಾರ್ಥಿಗಳ ಗಲಭೆಯಲ್ಲಿ ನಿರಾಪರಾಧಿಗಳಾದವರನ್ನು ಕೊಂದಿದ್ದಾರೆ. ಮಕ್ಕಳೂ ಹೆಂಗಸರೂ ಸತ್ತಿದ್ದಾರೆ. ಅದರ ಬಗ್ಗೆ ಪ್ರಜಾಪ್ರಭುತ್ವ ಸರ್ಕಾರ, ಈ ದೇಶವನ್ನು ಆಳತಕ್ಕ ಒಂದು ಪಕ್ಷದ ಅಧ್ಯಕ್ಷರಾಗಿದ್ದಾರೆಂದು ಹೇಳತಕ್ಕ ಶ್ರೀಮಾನ್ ನಿಜಲಿಂಗಪ್ಪನವರ ಸರ್ಕಾರ ಇವತ್ತು ಒಂದು ನಿಲುವನ್ನು ತೆಗೆದುಕೊಳ್ಳುತ್ತಿಲ್ಲ, ಸತ್ತವರ ಬಗ್ಗೆ ಕರುಣೆಯಾಗಲೀ, ಸತ್ತವರ ಕುಟುಂಬಗಳವರಿಗೆ ಪರಿಹಾರ ಕೊಡುವ ಮಾತಾಗಲೀ ಇಲ್ಲ. ಈ ಬೇಜವಾಬ್ದಾರಿ ಸರ್ಕಾರಕ್ಕೆ ಹೇಳುವವರೂ ಕೇಳುವರೂ ಅಂಥ ಯಾರೂ ಇಲ್ಲ. ಇವರಿಗೆ ಹೇಳುವವರು ಮತ್ತು ಕೇಳುವವರು ಹೊರಗಡೆಯ ಪ್ರಜೆಗಳು, ಪ್ರಜೆಗಳು ಇವತ್ತು ನಮ್ಮನ್ನು ಚುನಾಯಿಸಿ ಇಲ್ಲಿಗೆ ಕಳಿಸಿದ್ದಾರೆ, ಈ ಸರ್ಕಾರ ಏನು ಮಾಡುತ್ತದೆ ಎಂದು ಕೇಳುವುದಕ್ಕೆ ಕಳಿಸಿದ್ದಾರೆ.

ಶ್ರೀಮಾನ್ ನಿಜಲಿಂಗಪ್ಪನವರು ಅರ್ಧನಾರೀಶ್ವರರಾಗಿದ್ದಾರೆ. ಅವರಿಗೆ ಎರಡು ತಲೆ, ಎರಡು ನಾಲಿಗೆ, ನಾಲ್ಕು ಕಾಲು, ನಾಲ್ಕು ಕೈ, ಆಗಿದೆ. ಇವತ್ತಿನ ದಿವಸ ಕಾಂಗ್ರೆಸ್ಸಿಗೆ ಒಂದು ಶರೀರ, ಮುಖ್ಯ ಮಂತ್ರಿಗಳಿಗೆ ಒಂದು ಶರೀರವಿದೆ ಎನ್ನುವಂತಾಗಿದೆ. ನಮ್ಮ ರಾಜ್ಯ ಪೋಲೀಸು ರಾಜ್ಯವಾಗಿದೆ. ನಿಜಲಿಂಗಪ್ಪನವರ ಅಧಿಕಾರದಲ್ಲಿ ಪೋಲೀಸರು ನಡೆಸಿರತಕ್ಕ ಅಕೃತ್ಯಗಳು ಬೇರೆ ಯಾವ ರಾಜ್ಯದಲ್ಲಿಯೇ ಆಗಲೀ, ಇಡೀ ವಿಶ್ವದಲ್ಲಿ ಎಲ್ಲಿಯೇ ಆಗಲೀ ನಡೆದಿಲ್ಲ. ಮೈಸೂರು ರಾಜ್ಯದಲ್ಲಿ ಪೋಲೀಸರು ನಡೆಸಿರತಕ್ಕ ಗೂಂಡಾಗಿರಿ, ಅವರಿಂದ ಆಗಿರತಕ್ಕ ಅನ್ಯಾಯಗಳು, ಇವುಗಳಿಂದ ಶ್ರೀಮಾನ್ ನಿಜಲಿಂಗಪ್ಪನವರು ತಪ್ಪಿಸಿಕೊಳ್ಳಲಾರರು. ದೇಶದಲ್ಲಿ ಇಂಥ ಅನ್ಯಾಯಗಳು ಆಗುವುದನ್ನು ತಡೆಗಟ್ಟಲು ಸಾಧ್ಯವಿಲ್ಲದೆ ಹೋದರೆ ಅವರು ಮುಖ್ಯ ಮಂತ್ರಿ ಸ್ಥಾನವನ್ನು ಬಿಟ್ಟು ಕಾಂಗ್ರೆಸ್ ಅಧ್ಯಕ್ಷರಾಗಿ ಹೋಗಲಿ, ಅಥವಾ ಬೇರೆ ಎಲ್ಲಿಗಾದರೂ ಹೋಗಲಿ, ಅದಕ್ಕೂ ನನಗೂ ಸಂಬಂಧವಿಲ್ಲ.......

ಉಪಾಧ್ಯಕ್ಷರು.—ಈ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ವಿಷಯವನ್ನು ಮುಖ್ಯ ಮಂತ್ರಿಗಳಿಗೆ ತಿಳಿಸಲಾಗುತ್ತದೆ......

ಶ್ರೀ ಎಸ್. ಚೆನ್ನಯ್ಯ (ಕೃಷ್ಣರಾಜ).—ಬೇರೆ ವಿಷಯ ತೆಗೆದುಕೊಳ್ಳುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈಗ ರಾಜ್ಯದಲ್ಲಿ ಯಾರು ಗೃಹ ಮಂತ್ರಿಗಳು ! ಶ್ರೀಮಾನ್ ಜತ್ತಿಯವರೇ, ಕಂಠಿಯವರೇ, ರಾಚಯ್ಯನವರೇ, ಇದನ್ನು ತಿಳಿಸಬೇಕು. ಶಾಲಾ ಕಾಲೇಜುಗಳು ಮುಚ್ಚಿ ವಿದ್ಯಾರ್ಥಿಗಳು ಕಾಲೇಜುಗಳಿಗೆ ಹೋಗದೆ ಮುಂದೆ ಅವರ ಪ್ರಶ್ನೆ ಏನು ಎನ್ನುವುದನ್ನು ಮತ್ತು ಇದರ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನೂ, ಯಾವಾಗ ಕಾಲೇಜುಗಳನ್ನು ತೆರೆದು ವಿದ್ಯಾರ್ಥಿಗಳು ಕಾಲೇಜುಗಳಿಗೆ ಹೋಗಿ ಅವರ ವ್ಯಾಸಂಗವನ್ನು ಮುಂದುವರಿಸುವುದಕ್ಕೆ ಅವಕಾಶ ಕೊಡಲಾಗುತ್ತದೆ ಎನ್ನುವುದನ್ನು ಹೇಳಬೇಕು. ಈ ಬಗ್ಗೆ ನ್ಯಾಯವನ್ನು ದೊರಕಿಸಿ ಕೊಡಬೇಕು. ಇಲ್ಲದೆ ಇದ್ದರೆ ಮುಂದೆ ಅಂದೋಳನ ಮಾಡಬೇಕಾಗುತ್ತದೆ ಎನ್ನುವುದನ್ನು ಘಂಟಾಘೋಷವಾಗಿ ಈ ಸಭೆಯಲ್ಲಿ ಹೇಳುತ್ತೇನೆ.

Sri V. N. PATIL (Humnabad).—Sir, the matter is very simple. To-day, we do not know whom to represent any grievance of the people. Police atrocities have occurred in Bidar district and in Madhugiri and the Home Minister has no face to face this House. Sri B. D. Jatti who is, I learn, looking after the Home portfolio, promised to visit Bidar district and Markal village in Bidar district, where more than 200 Harijans of Bothagi have been rendered homeless and almost all the male population of that village is impleaded as accused, causing brutal harassment to the villagers, forcing them to fly from their village on account of the inhuman beating of the villagers, even not sparing boys of 12 years from arrest, insulting behaviour to the ladies by the interested S. I. of Police Chitgoppa, deliberate loss to the standing crops and loot of property by the police in league with Goondas and see that everything is set right. He has never come so far. Is this not gross irresponsibility on the part of this Government ? Then, is this a Government without a Cheif Minister ? Sri Nijalingappa goes to one place and speaks like the Chief Minister of Mysore and at another place he speaks like the Congress President. His statements are inconsistant. At one place he speaks of the law and order and when outside his State, in neighbouring States he preaches violence to out the progressive non-Congress Governments, to topple them, in his another Dwimukha capacity as Congress President. We do not want a Chief Minister serving as a part-timer at full salary from the hard earned money of the Kannadigas. He must choose either one of them. If he is so fond of Chief Ministership, let him resign from Congress Presidentship. We want only a full-timer who can devote his full time to serve the people.

Sri S. R. KANTHI.—Sir......

Mr. DEPUTY SPEAKER.—Order, Order.

Sri M. S. KRISHNAN.—Sir, Is it in order the Minister is standing when the hon'ble member is on his legs ?

Sri K. H. PATIL.—Sir, a Point of order. When the hon'ble member Sri V. N. Patil is addressing the House, Sri S. R. Kanthi is standing. Is it not breach of the rule ?

Sri V. N. PATIL.—If it is a responsible Government......

Sri S. R. KANTHI.—I rise to a point of Order. What is all this argument? Let us all talk with some sense. After all we are discussing a subject.

Sri S. CHANNIAH.—He cannot talk like that. What is the meaning of his saying 'no sense'?

(*Interruptions*)

Mr. DEPUTY SPEAKER.—Order, Order.

Sri S. R. KANTHI.—I have not said anything.

ಶ್ರೀ ಎಸ್. ಚನ್ನಯ್ಯ.—ಅವರೊಬ್ಬರಿಗೇ ಸೆನ್ಸ್ ಇರುವುದು, ಉಳಿದವರಿಗಿಲ್ಲ ಎಂದು ಅರ್ಥ ಬರುವಂತೆ ಅವರು ಹೇಳಿದ ಮಾತುಗಳನ್ನು ವಾಪಸು ತೆಗೆದುಕೊಳ್ಳಬೇಕು.

Sri S. R. KANTHI.—What did I say? I did not say that the hon'ble member was not talking with sense. What I said was let us talk with sense.

Mr. DEPUTY SPEAKER.—Order, Order.

(*Interruptions*)

Sri DIGAMBAR RAO B. KALMANKAR (Aland).—He presumes that whatever he says......

Mr. DEPUTY SPEAKER.—Order, order. I will have to ask the hon'ble member to retire from the House.

(*Interruptions*)

Sri S. R. KANTHI.—The hon'ble members are angry today and talk in an excited manner. I find in the first place it is not necessary for the Chief Minister to be present here today or tomorrow or any day. After all it is good that he should come and be present here. But if there are certain circumstances beyond his control, like illness he need not come. That should not prevent us from talking on the subject on hand. I request the members to know that they have enough opportunities to tell what they feel when the Address is discussed here. That is why I told him why waste the time. There are three or four days; they have enough opportunity to speak on the point.

Sri V. N. PATIL.—I am not prepared to yield.

Sri S. R. KANTHI.—I seek the protection of the Chair. I request that the subject may be taken up.

(*Interruptions*)

ಉಪಾಧ್ಯಕ್ಷರು.—ನಾನು ಹೇಳುವುದನ್ನು ಮಾನ್ಯ ಸದಸ್ಯರು ಸ್ವಲ್ಪ ಗಮನಿಸಿದರೆ ಒಳ್ಳೆಯದು. ಮುಖ್ಯ ಮಂತ್ರಿಗಳು ಬಂದು ಹೇಳಿಕೆ ಕೊಡುವವರೆಗೆ ಸಭೆಯು ಕಾರ್ಯಕಲಾಪಗಳು ನಡೆಯಬಾರದೆಂದು ಹೇಳುವುದು ಸರಿಯಲ್ಲ. ಹಾಗೆ ಹೇಳುವುದಾದರೆ ನೀವು ಒಂದು ಮೋಷನ್ ಮೂವ್ ಮಾಡಿ, ಯಾವ ರೂಲ್ ಪ್ರಕಾರ ಚರ್ಚೆ ಮಾಡುತ್ತಿದ್ದೀರೆಂಬುದನ್ನು ಹೇಳಿ.

ಶ್ರೀ ಎಸ್. ಚನ್ನಯ್ಯ.—ನಾವು ಮೋಷನ್ ಮೂವ್ ಮಾಡುವುದಕ್ಕೆ ತಯಾರಾಗಿಲ್ಲ; ನಿಜಲಿಂಗಪ್ಪನವರು ಬಂದು ಹೇಳಿಕೆ ಕೊಡುವವರೆಗೆ ಉಳಿದ ವಿಚಾರಗಳನ್ನು ಚರ್ಚೆಮಾಡಲು ನಾವು ಅವಕಾಶಕೊಡುವುದಕ್ಕೆ ತಯಾರಾಗಿಲ್ಲ.

ಉಪಾಧ್ಯಕ್ಷರು.—ರೂಲ್ಸ್ ಬಿಟ್ಟು ಕೆಲಸಮಾಡುವುದಕ್ಕಾಗುವುದಿಲ್ಲ. ನಾಳೆ ನೀವು ಕೇಳಿರುವುದಕ್ಕೆಲ್ಲಾ ಉತ್ತರ ಕೊಡುವಂತೆ ಮುಖ್ಯ ಮಂತ್ರಿಗಳಿಗೆ ತಿಳಿಸುತ್ತೇನೆ.

ಒಬ್ಬ ಸದಸ್ಯರು.—ಹಾಗಾದರೆ ಈಗ ಸಭೆ ಅಡ್‌ಜರ್ನ್ ಮಾಡಿ.

ಶ್ರೀ ಎಸ್. ಶಿವಪ್ಪ.—ಪಾರ್ಲಿಮೆಂಟರಿ ಅಫೇರ್ಸ್ ಸಚಿವರು ಮುಖ್ಯ ಮಂತ್ರಿಗಳು ಯಾವತ್ತೂ ಇರಬೇಕಾಗಿಲ್ಲವೆಂದು ಹೇಳಿದರು. ಸರಕಾರ ನಡೆಸುವವರಿಗೆ ನಿಜವಾಗಿಯೂ ಕೂಡ ಈ ಧೋರಣೆ ಇರುವುದು ಸರಿಯಲ್ಲ. ಮುಖ್ಯ ಮಂತ್ರಿಗಳಿಲ್ಲದಿದ್ದರೂ ಪರವಾಗಿಲ್ಲ, ಸರಕಾರ ನಡೆಯುತ್ತದೆ ಎಂದು ಹೇಳುವುದು ಸರಿಯೇ ?

ಶ್ರೀ ಎಸ್. ಆರ್. ಕಂಠಿ.—ನಾನು ಹಾಗೇ ಹೇಳಲಿಲ್ಲ.

ಉಪಾಧ್ಯಕ್ಷರು.—ಮುಖ್ಯ ಮಂತ್ರಿಗಳಿಗೆ ತಿಳಿಸಿ ಅವರು ನೀವು ಹೇಳಿರುವುದಕ್ಕೆಲ್ಲಾ ಉತ್ತರ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ. ಈಗ ಮುಂದಿನ ಕೆಲಸ ನಡೆಯಲಿ.

ಶ್ರೀ ಎಸ್. ಚನ್ನಯ್ಯ.—ನಿನ್ನೆ ದಿವಸ ನಾನು ಕೊಡಬೇಕಾದ ಗೌರವ ಕೊಟ್ಟೆ. ನಿನ್ನೆ ಬೇರೆಬೇರೆ ಕಾರಣಗಳಿಂದ ನಾವು ಗಲಾಟೆ ಮಾಡಬೇಕೆಂದಿದ್ದರೂ ಮಾಡಲಿಲ್ಲ. ದಯವಿಟ್ಟು ಈ ದಿವಸ ನಮಗೆ ಗೌರವ ಕೊಡಬೇಕು.

4-00 P.M.

Sri S. S. SHETTAR.—Sir, I raise a point of order under article 163 read with article 166. Article 163 says that the Council of Ministers should aid and advise the Governor. Article 166 (3) says :

> "The Governor shall make rules for the more convenient transaction of the business of the Government of the State, and for the allocation among Ministers of the said business in so far as it is not business with respect to which the Governor is by or under this Constitution required to act in his discretion."

The Chief Minister has chosen to remain absent from the House today and his business has to be looked after by some other Minister. At the same time, the Home Minister has resigned and his business is taken over by the Chief Minister. I want the Hon'ble Minister for Parliamentary Affairs to enlighten the House whether any rules have been framed as to how the business of one Minister can be entrusted to another Minister.

Mr. DEPUTY SPEAKER.—With reference to the point of order raised by the Hon'ble Member Sri S. S. Shettar, there was already a discussion on the same points and he has urged the same points which have been urged already. I am therefore unable to uphold the point of order.

If members want to discuss this subject, they may move a motion on it.

(*Several members rose on points of order*).

I request the hon. Members to proceed with the buisness on the agenda. Even without a formal motion, we have discussed this matter at length. The only remedy now is either to take the sense of the House whether the work should be proceeded with or whether a motion is to be moved on this subject.

Sri H. SIDDAVEERAPPA.—If it is your intention that this subject should be discussed by means of a formal motion, probably there cannot be any objection to it. We would like to make it clear that there should be no question of allowing this motion to go without full discussion.

ಉಪಾಧ್ಯಕ್ಷರು.—ಶ್ರೀಮಾನ್ ಸಿದ್ಧವೀರಪ್ಪನವರೇ ಮುಖ್ಯಮಂತ್ರಿಗಳು ಬಂದು ಸ್ಟೇಟ್‌ಮೆಂಟ್ ಕೊಡುವವರೆಗೂ ಮುಂದಿನ ಕಾರ್ಯಕಲಾಪಗಳು ನಡೆಯಕೂಡದು ಎಂದು ಮಾನ್ಯ ಸದಸ್ಯರು ಹೇಳುತ್ತಾರೆ, ಆ ಪದ್ಧತಿಯನ್ನು ಒಪ್ಪುತ್ತೀರಾ ? ಅದು ಸರಿಯೇ ? ಅದನ್ನು ಮಾಡುವುದಾದರೂ ಯಾವ ಕಾನೂನು ಪ್ರಕಾರ ಯಾವ ರೂಲ್ಸ್ ಪ್ರಕಾರ ಮಾಡಬೇಕು ಹೇಳಿ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಯಾವ ಕಾನೂನು, ರೂಲ್ಸ್ ಇದೆ ಇದನ್ನು ಪಾಂಡವರು ವನವಾಸಕ್ಕೆ ಹೋಗಬೇಕಾದರೆ ಬನ್ನಿಮರದ ಮೇಲೆ ಯಾವ ರೀತಿ ಕಟ್ಟಿದ್ದಾರೋ ಅದೇ ರೀತಿ ಸ್ವಲ್ಪ ದಿವಸ ಕಟ್ಟಿಡಬೇಕು, ಏಕೆಂದರೆ ಕಾನೂನು ಈಗ ಯಾವುದೂ ನಡೆಯುತ್ತಿಲ್ಲ. ಕಾನೂನು ಪ್ರಕಾರ ಸರ್ಕಾರ ನಡೆಯುತ್ತಿಲ್ಲ ಎಂಬುದನ್ನು ತಮಗೆ ತೋರಿಸಿಕೊಡುತ್ತೇನೆ. ತಾವು ಕಾನೂನು ಪ್ರಕಾರ ರಾಜ್ಯಭಾರ ಮಾಡುತ್ತಿಲ್ಲ, ಹೊರಗಡೆಗೆ ಮಾತ್ರ ಕಾನೂನಿನ ಚೌಕಟ್ಟನ್ನು ತೋರಿಸುತ್ತಾ ಇದ್ದೀರಿ. ಅದಕ್ಕೋ ಸರ್ಕಾರ ಇಲ್ಲ ಈ ಸರ್ಕಾರ ಕುಸಿದು ಬಿದ್ದಿದೆ ಎಂದು ಹೇಳುತ್ತಾ ಇದ್ದೇವೆ. ಆದ್ದರಿಂದ ಕುಸಿದು ಬಿದ್ದಿರತಕ್ಕ ಈ ಸರ್ಕಾರಕ್ಕೆ ಮರದ ಕಾಲು ಕಟ್ಟಿಸಿ ನಿಲ್ಲಿಸುವುದರಲ್ಲಿ ಪ್ರಯೋಜನವಿಲ್ಲ. ನಮ್ಮ ಅಭಿಪ್ರಾಯದಲ್ಲಿ ದೇಶದಲ್ಲಿರವುದು, ಹೊರಗಡೆಯೂ ಸಹ ಅಭಿಪ್ರಾಯವಿರುವುದು ಮತ್ತು ಎಲ್ಲ ತಜ್ಞರು ಸಹ ಹೇಳುತ್ತಾ ಇರುವುದು ಮೈಸೂರು ರಾಜ್ಯಾಡಳಿತದಲ್ಲಿ ಹಾಫ್ ಚೀಫ್ ಮಿನಿಸ್ಟರು ಇದ್ದಾರೆ ಇಂಡಿಯಾದಲ್ಲಿ ಹಾಫ್ ಕಾಂಗ್ರೆಸ್ ಪ್ರೆಸಿಡೆಂಟರು ಇದ್ದಾರೆ ಎಂದು. ಈ ರೀತಿಯಾಗಿ ಅವರು ಎರಡು ಕಡೆಯೂ ಇದ್ದಾರೆ ಎಂದು ದೊಡ್ಡ ದೊಡ್ಡ ಪತ್ರಿಕೆಗಳವರೂ ಹೇಳಿದ್ದಾರೆ. ಬೇಕಾದರೆ ಅದನ್ನು ನಿದರ್ಶನವಾಗಿ ತಂದು ಹೇಳುತ್ತೇನೆ. ಫಾರ್ಮಲ್ ಮೋಷನ್ ಮೂವ್ ಮಾಡಬೇಕೆಂದರೆ ಮೂವ್ ಮಾಡುತ್ತೇವೆ.

ಉಪಾಧ್ಯಕ್ಷರು.—ಈಗ ಮುಂದಿನ ಕಾರ್ಯಕಲಾಪಗಳನ್ನು ನಡೆಸುವುದಕ್ಕೆ ಸಭೆಯು ಒಪ್ಪಿಗೆಯನ್ನು ಕೇಳುತ್ತೇನೆ, ಇದು ಇತ್ಯರ್ಥವಾಗುವವರೆಗೂ ಚರ್ಚೆ ಮಾಡುವುದು ಬೇಡ ಎನ್ನುವುದಾದರೆ ಅದಕ್ಕೆ ಸಭೆಯ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ.

SRI K. H. RANGANATH (Mudigere).—If the motion is to be taken, the question of taking the sense of the House does not arise.

Mr. DEPUTY SPEAKER.—To proceed with the work, I have to take the sense of the House.

Sri K. H. RANGANATH.—In respect of the Tour Programme that has been issued from the office of the Chief Minister, which is that provision of law which has empowered the office of the Chief Minister to issue the tour programme as the Chief Minister of the State and as President of A. I. C. C. ? Is it according to law ?

Mr. DEPUTY SPEAKER.—The point is whether we should continue the proceedings or not ?

Sri K. H. RANGANATH.—That is there. But before that matter...

ಶ್ರೀ ಎಸ್. ಶಿವಪ್ಪ.—ನಾವು ಕೇಳುತ್ತಿರುವುದು ಒಂದು ಮೂಲಭೂತವಾದ ಪ್ರಶ್ನೆ. ಈ ದಿವಸ ದೇಶದ ಮುಖ್ಯ ಮಂತ್ರಿಯ ಕಛೇರಿ ಕಾಂಗ್ರೆಸ್ ಕಛೇರಿಯಾಗಿದೆ. ಇದು ಸರಿ ಎನ್ನುವುದಾಗಿ ಯಾವ ಕಾನೂನಿನಲ್ಲಿ ಅಡಕವಾಗಿದೆ ? ಈ ದಿವಸ ಈ ಸಾರ್ವಜನಿಕರ ಕಛೇರಿ ಆದ ವಿಧಾನಸೌಧ ಒಂದು ಕಾಂಗ್ರೆಸ್ ಕಛೇರಿಯಾಗಿ ಪರಿವರ್ತನೆಯಾಗಿದೆ. ಇಂಥಾ ವಿಚಾರಕ್ಕೆ ಸಭೆಯು ತನ್ನ ಅನುಮತಿಯನ್ನು ಕೊಡಲು ಸಾಧ್ಯವೇ ಎಂಬುದನ್ನು ಅಧ್ಯಕ್ಷರು ಗಮನಕ್ಕೆ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು.—ಮುಖ್ಯಮಂತ್ರಿಗಳು ಸಭೆಗೆ ಬಂದಮೇಲೆ ಅವರು ಹೇಳಿಕೆಯನ್ನು ಕೊಡುವ ಹಾಗೆ ಮಾಡೋಣ. ಆದರೆ ನಾನೀಗ ಈ ಸಭೆಯನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎಂಬುದನ್ನು ತಿಳಿಯಲು ಸಭೆಯ ಅನುಮತಿಯನ್ನು ಕೇಳಬೇಕೆಂದಿದ್ದೇನೆ.

I will take the opinion of the House.

(*Many Members from the Opposition Side stood up*)

Sri S. SIVAPPA.—Should we allow them to loot? They are looting...

ಶ್ರೀ ಎಸ್. ಚನ್ನಯ್ಯ.—ತಾವು ಸಭೆಯ ಅನುಮತಿ,.............

ಉಪಾಧ್ಯಕ್ಷರು.—ತಾವು ದಯವಿಟ್ಟು ಒಂದು ವಿಚಾರ ಗಮನಿಸಬೇಕು............

ಶ್ರೀ ಹೆಚ್. ಚನ್ನಯ್ಯ.—ನಾವೂ ಗಮನಿಸಬೇಕು, ತಾವೂ ಗಮನಿಸಬೇಕು, ನಾವೂ ಶಾಂತವಾಗಿರಬೇಕು, ತಾವೂ ಶಾಂತವಾಗಿರಬೇಕು. ಅದನ್ನು ತಾವು ಕೈ ಬಿಟ್ಟು ತಮ್ಮ ಕಡೆ ಬಲವಾದ ಪಾರ್ಟಿ ಇದೆ, ಅದರಿಂದ ಅವರ ಕೈಗಳನ್ನೆತ್ತಿಸೋಣ ಎಂದು ಪ್ರಯತ್ನ ಮಾಡುವುದು ಯಾವ ನ್ಯಾಯ?

ಶ್ರೀ ಕೆ. ಎಚ್. ಪಾಟಿಲ್.—ಇದೇ ಮೊದಲ ಪ್ರಸಂಗವಲ್ಲ. ಇಲ್ಲಿ ಇಂಥ ಪ್ರಸಂಗಗಳು ಅನೇಕ ನಡೆದಿವೆ. ಆ ಕಾಲದಲ್ಲಿ ಸಭಾಧ್ಯಕ್ಷರಾಗಿದ್ದವರು ಯಾವರೀತಿ ನಡೆದುಕೊಂಡಿದ್ದಾರೆಂಬುದು ತಮಗೂ ಗೊತ್ತಿದೆ.........

ಉಪಾಧ್ಯಕ್ಷರು.—ನಾನು ಮೊದಲೇ ತಮ್ಮಲ್ಲಿ ತಿಳಿಸಿದ್ದೇನೆ. ಮುಖ್ಯಮಂತ್ರಿಗಳು ಬಂದ ಮೇಲೆ ಅವರಿಂದ ಈ ಬಗ್ಗೆ ಉತ್ತರವನ್ನು ಕೊಡಿಸಲಾಗುತ್ತದೆ ಎಂದು. ತಮಗೆ ಅವರಿಂದ ಉತ್ತರ ಹೇಳಿಸಬಾರದೆಂಬ ಅಭಿಪ್ರಾಯ ನನಗಿಲ್ಲ..... ......

ಶ್ರೀ ಎಸ್. ಗೋಪಾಲಗೌಡ.—ನಾವು ಅವರು ಬರುವತನಕ ಕಾಯುವುದಕ್ಕಾಗುವುದಿಲ್ಲ.

ಉಪಾಧ್ಯಕ್ಷರು.—ತಾವು ಎಕ್ಸ್‌ಪೀರಿಯನ್ಸ್‌ಡ್ ಪಾರ್ಲಿಯಮೆಂಟೇರಿಯನ್. ತಾವೇ ಹೀಗೆ ಹೇಳಿದರೆ ಏನು ಹೇಳಲಿ?

ಶ್ರೀ ಎಸ್. ಚನ್ನಯ್ಯ.—ನಾವು ಹಾಗೆ ಎಕ್ಸ್‌ಪೀರಿಯನ್ಸ್‌ಡ್ ಪಾರ್ಲಿಯಮೆಂಟೇರಿಯನ್ ಅನ್ನುವುದು ತಮಗೆ ಚೆನ್ನಾಗಿ ಗೊತ್ತಿದ್ದರೆ ತಾವು ನಾವು ಹೇಳುವುದನ್ನು ಸಾವಧಾನದಿಂದ ಕೇಳಿ.

ಉಪಾಧ್ಯಕ್ಷರು.—ತಾವು ಎಕ್ಸ್‌ಪೀರಿಯನ್ಸ್‌ಡ್ ಪಾರ್ಲಿಯಮೆಂಟೇರಿಯನ್ನೇ. ಆದುದರಿಂದ ತಾವು ನಾನು ಹೇಳುವುದಕ್ಕೆ ಗೌರವವನ್ನು ಕೊಡಬೇಡವೇ? ತಾವು ನನಗೆ ಸಹಕಾರ ನೀಡಬೇಕು. ನಾಳೆ ಮುಖ್ಯಮಂತ್ರಿಗಳು ಬಂದಮೇಲೆ ಅವರಿಂದ ಉತ್ತರ ಕೊಡುವಂತೆ ಮಾಡೋಣ. ಈಗ ಸಭೆಯು ತನ್ನ ಮುಂದಿನ ಕಾರ್ಯಕ್ರಮಗಳನ್ನು ಮುಂದುವರಿಸಲು ತಾವು ಸಹಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಚನ್ನಯ್ಯ.—ಈ ದಿವಸ ಬೆಳಗ್ಗೆ ಅಧ್ಯಕ್ಷರು ಏಕೆ ಸಭೆಯನ್ನು ಅಡ್ಜರ್ನ್ ಮಾಡಿದರು? ಅವರಿಗೆ ಉತ್ತರ ಕೊಡಲು ಅವಕಾಶವಿಲ್ಲದ್ದರಿಂದಲ್ಲವೇ? ಅವರು ಸಿಕ್ಕಬಹುದು ಅವರನ್ನು ಕಂಡು ಮಾತನಾಡಿ ಮುಂದೇನು ಮಾಡಬೇಕೆಂಬುದನ್ನು ನಿರ್ಧರಿಸಬೇಕೆಂದು ಅವರು ಪ್ರಯತ್ನ ಮಾಡಿದರು ಅದಕ್ಕೆ ಅವಕಾಶವಾಗಲಿಲ್ಲ ಅಂತ ಕಾಣುತ್ತದೆ. ನಾಳೆ ಅವರು ಸಿಕ್ಕಬಹುದು. ಅಲ್ಲಿಯ ತನಕ ಸಭೆಯನ್ನು ಮುಂದಕ್ಕೆ ಹಾಕಿ. ನಾವು ಹೇಳುವುದನ್ನು ತಾವು ಕೇಳಿದರೆ, ತಾವು ಹೇಳುವುದನ್ನು ನಾವೂ ಕೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ತಾವು ದಯವಿಟ್ಟು ಸಭೆಯನ್ನು ಮುಂದಕ್ಕೆ ಹಾಕುವ ಹಾಗೆ ಮಾಡಿ, ಅದರಿಂದ ಬಹಳ ಒಳ್ಳೆಯದಾಗುತ್ತದೆ.

ಉಪಾಧ್ಯಕ್ಷರು.—ತಾವು ಒಬ್ಬರು ಹಾಗೆ ಹೇಳಿದರೆ ಸಾಲದು. ನಾನು ಈ ವಿಚಾರದಲ್ಲಿ ಸಭೆಯ ಅಭಿಪ್ರಾಯವನ್ನು ಕೇಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್.—ತಮಗೆ ಒಳ್ಳೆಯದಾಗಲೆಂದೇ ನಾನು ಇದನ್ನು ಸೂಚಿಸುತ್ತಿದ್ದೇನೆ. ತಾವು ದಯವಿಟ್ಟು ಸಭೆಯನ್ನು ಮುಂದಕ್ಕೆ ಹಾಕಿ.

Sri DIGAMBARA RAO B. KALAMANKAR.—Sir, I raise to a point of Order.

Sri B. V. MAGAVI (Haveri).—On a point of Order, Sir, There is almost a pendemonium prevailing in the House......

Sri DIGAMBARA RAO B. KALMANKAR.—Sir, I heard just now the Minister for Parliamentary Affairs saying that the Chief Minister will be coming tomorrow. As per his version, the Chief Minister is having

headache. I do not know whether it is a headache of the succession of some other type of headache. At this stage I am unable to pass any further remark. This House is not having any Leader.

Mr. DEPUTY SPEAKER.—Under which rule ?

Sri DIGAMBARA RAO B. KALMANKAR.—As defined in Section 2, the Leader of the House means the Chief Ministers or any member appointed by the Council of Minister as the Leader of the Assembly. As it is seen from the deliberations so far, there is no person appointed as Leader in the absence of the Chief Ministers here. The Government must appoint some person as Leader of the House. As long as he is not appointed, I submit that no person can be the Leader of the House. In this particular context, it is a very important and basic problem as to whether the Chief Minister also can be the President of A.I.C.C, and if he is both, whether he can do full justice to the duties as the Chief Minister which, job requires full-time. That is a very important point that is involved.

There is also a problem regarding the resignation of the Home Minister, without any statement being made in this House. This House was kept in the dark. So many developments have taken place in the City of Bangalore and other towns, which are agitating the minds of the people of the State. There was firing in many places. All these important issues have to be considered before the House, because we represent millions of people and we have to be answerable to them. In view of the fact that the Leader of the House is absent and the Government has not appointed any other person as the Leader of the House, and the Chief Minister himself not being present in the House, no proceedings can take place.

Mr. DEPUTY SPEAKER.—The Point of Order raised by the learned member, Sri Kalmankar is irrelevant.

Sri DIGAMBARA RAO B. KALMANKAR.—I must be given the reasons, Sir.

Mr. DEPUTY SPEAKER.—The post of the Leader of the House is not vacant. To-day he is not in the House and he has sent a letter that he is not well. Mr. Digamber Rao has said that there is no leader of the House and the Government has not appointed any leader of the House. But it is not so. Therefore, I am unable to uphold the point of order.

(Some members stood up and shouted).

The only course is I will take the opinion of the House whether we should proceed with the work or not.

(Some members stood up to raise point of order)

Sri M. NAGAPPA (Riachur).—My point of order is that the provisions of Rule 18 read with Rule 311 are not complied with. I will read rule 311. It reads as follows :

"311. (1) A point of order shall relate to the interpretation or enforcement of these rules or such articles of the Constitution

(SRI NAGAPPA)

as regulate the business of the Assembly and shall raise a question which is within the cognigance of the Speaker.''
Rule 18 reads as follows :

"18. (1) The Speaker shall report to the Assembly that the Governor was pleased to address the Legislature and place a copy of it on the Table of the House."

"(2) The Speaker shall in consultation with the Leader of the House, allot time for the discussion of the matters referred to in the Governor's Address to the Houses under Article 176 of the Constitution.''

Therefore, there is no leader of the House at present for consultation. The provisions of Rule 18 Sub-Rule (2) will be contravened if the proceedings are taken up. The proceedings cannot be taken up unless the leader of the House comes here and the time for discussion of the matters referred in the Address is fixed. Otherwise it cannot be taken up.

Mr. DEPUTY SPEAKER.—Everything has been done.

†**Sri S. D. KOTHAVALE** (Sankeswar).—Hon'ble Member Sri Nagappa has said that poovisions under Rule 18 have not been complied with. He said that proceedings cannot be taken up unless the time is allotted in consultation with the Leader of the House. The agenda that is circulated has shown that number of days has already been fixed for Government business and all that. This has been done in consultation with the leader of the House. Therefore, in the existing circumstances this does not arise. The physical presence of the Leader of the House, is not at all necessary. According to the Agenda the motion has to be moved to day and to be discussed. Consultation in regard to this has already taken place and the Hon'ble Speaker has fixed days. Therefore, the point of order raised cannot survive. Regarding the resignation of the Home Minister, a point is raised, whether it is correct to resign before informing the House and all that. The legality and constitutionality of his resignation will be looked into and I think, the Hon'ble Speaker would give his ruling about this. Now the position is under rule 31, sub-rule (2) says like this :

"(2) A list of business for the day shall be prepared by the Secretary, and a copy thereof together with other papers, if any, shall be made available for the use of every member, the previous day :

Provided the Speaker may suspend the operation of this rule in respect of any particular day or days.

Sub-rule 3 Provides :

(3) Save as otherwise provided in the rules, no business not included in the list of business for the day shall be transacted at any meeting without the leave of the Speaker."

The qaestion arises that no point can be considered except on the motion. For this motion some days are necessary and an adjournment motion has to be moved and that motion has to be moved two hours before the commencement of the day. Let the Hon'ble members of the opposition present it to the Speaker and let them move it. They are quite welcome. Unless there is a motion there cannot be any discussion on this subject. According to Rule 31, no business can be taken unless it is included in the list of business.

4-30 P.M.

Under the rule no subject can be taken up. It is quite clear that for the purpose of a motion, some days notice is necessary and if they contemplate moving an adjournment motion, it should be moved before the passing of the day. They are quite welcome to do it. Probably tomorrow let them bring up to the Hon'ble Speaker a motion through the Secretary and then move it. There cannot be any discussion on it now. Sub-rule (3) says that only the business that is included in the day's agenda, should be taken up. Let us not waste the time. The motion could be replied tomorrow or day after tomorrow, for which I think, there is sufficient time, and heaven will not fall. Hence, the House may take up the business on the agenda in a regular manner instead of adjourning the House for the particular purpose.

You might consider whether such adjournment will be in order and whether the House gives leave to move that motion is another matter. Let us do the business regularly. I think there is much time. My learned brother Sri Siddaveerappa said that all rules should be taken out and thrown to winds. I think we are in a parliament. We should behave well. Otherwise, are we school boys just throwing stones? Are we going to do that? Are we acting as a model to the people? I beseech you—my brothers and friends—let us not act like that. Let us be a better model.

SRI H. SIDDAVEERAPPA.—A certain reference was made to me by my learned friend Mr. Kothawale that rules and regulations have to be bundled up and kept aside for sometime. I did not say it in a lighter way. I knew my full responsibility as member of this House when I made that statement. Because we are in an unreal world; we are sitting here in an unreal atmosphere; we are sitting here only for the sake of some plans in a democratic set up. But actually what is happening here is, there is no democracy functioning at all. I am only voicing as a representativeof the people. What the public feel about this anamolous situation created by the sympathy or the understanding of my learned friends there. I do not want to make any comments about it. Now the position is as Chief Minister, Mr. Nijalingappa is the first servant of Mysore State, and being the first servant of Mysore State, he is entirely responsible to this House, not only to that side, but also to this side. Our grievances are that as Leader of the

(SRI H. SIDDAVEERAPPA)

House he has been blundering, seriously blundering by continuing together in both the posts, which in our humble opinion works to the detriment of the State. He draws his salary and other things from the State Exchequer. Therefore supposing we have a servant in our house we will not allow him to do part-time work, unless it is with a full understanding that after working hours he can do so. It is not so in the constitution. I will show you tomorrow as to what happened in the British Parliament in about 1937. I have been keeping that reference with me and I will show it for the edification of my learned friend Mr. Kothawale. I am sure he will appreciate that when Crown's Salary Bill came up there, they said as to why they are paying salary to these Ministers. They said they are full time servants of the State, all the 24 hours and all the 365 days in a year. Whether he is in the hospital or he is eleswhere, he is a Minister and therefore, they say, that when once he draws the salary as a Minister in the Cabinet in British Government, he is not even allowed to write an article to the press. Because according to them, even if he takes one hour so much of the public time is taken away. In the times of India Illustrated Weekly the article is given. Wecan not wink at it. It is a developed State. They go so far as to say that all the 365 days they are Ministers.

Sri RAMAKRISHNA HEGDE (Minister for Finance and Planning).—Mr. Siddaveerappa forgets one important point, that in England the Prime Minister of that country, is also the Chairman of the party.

Sri S. CHANNAIAH.—He is the Chairman of your party also.

Sri H. SIDDAVEERAPPA.—I am prepared to answer that point. There is subtle difference. In England the Prime Minister does not draw the salary. But here under article 164 of the Constitution we have passed an Act. I invite your attention to section 14 of Act No. 5 of 1957. It is said that the Minister shall not do any other work which is detriment to the work of the State. Therefore, we are not saying it in a lighter way. This is an abnormal situation created by the Leader of the House for which there is no parallel. English Parliament does not hold good for this. Even to-day there is a paper cutting with me. In Hindustan Times and other papers it is said that "Mysore Chief Minister is half Chief Minister and All India Congress Committee President is half President", because he has to work in both the places. That is why I said—please drop your rules and take up this problem. Even if you want to take a rule there is rule 279. I do not want to take much of your time. This is a live problem. We have raised it not out of vanity or to create a fuss or any kind of such feelings. What I am saying is that this is a problem that has been affecting the entire country. We are too vitally interested. Our own feeling is that all these two months' happenings in the State are the direct result or the by-product of Mr. Nijalingappa continuing in both the posts. have no doubt in my

mind about it. Therefore, I said the rules may be kept in abeyance, because in an abnormal situation if you want to have any rules I have certain rules to say. Therefore, I am one of those who believe in rule of law, in common law and also in obedience to rules of law. But in an abnormal situation rules must be kept aside, for sometime.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ನಮ್ಮ ಸ್ನೇಹಿತರಾದ ಶಿವಪ್ಪನವರ ಹೇಳಿದ ಹಾಗೆ ಈಗ ಮಾನ್ಯ ನಿಜಲಿಂಗಪ್ಪನವರು ಎರಡನ್ನೂ ಇಟ್ಟುಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ, ನಮಗೂ ಸೆಂಟ್ರಲ್ ಗೌರ್ನಮೆಂಟಗೂ ಬೇಕಾದಷ್ಟು ಕಾನ್‌ಫ್ಲಿಕ್ಟ್ಸ್ ಇದೆ. ಇವರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿ ಮಾತನಾಡುತ್ತಾರೋ, ಕಾಂಗ್ರೆಸ್ ಅಧ್ಯಕ್ಷರಾಗಿ ಮಾತನಾಡುತ್ತಾರೋ ಎಂದು ಗೊತ್ತಾಗುವುದಿಲ್ಲ. ಈಗ ಮಹಾರಾಷ್ಟ್ರದವರಿಗೂ ನಮಗೂ ಗಡಿ ವಿಚಾರದಲ್ಲಿ ಒಂದು ಡಿಸ್ಪ್ಯೂಟ್ ಇದೆ. ನಮಗೂ ಕೇರಳದವರಿಗೂ ಗಡಿ ವಿಚಾರದಲ್ಲಿ ಡಿಸ್ಪ್ಯೂಟ್ ಇದೆ. ನಮಗೂ ಕೇಂದ್ರ ಸರ್ಕಾರದವರಿಗೂ ಉತ್ತರ ಪ್ರದೇಶದವರಿಗೂ ಹಿಂದಿ ವಿಚಾರದಲ್ಲ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಇವುಗಳ ಬಗ್ಗೆ ಇವರು ಮುಖ್ಯ ಮಂತ್ರಿಯಾಗಿ ಮಾತಾಡುತ್ತಾರೋ, ಅಥವಾ ಕಾಂಗ್ರೆಸ್ ಅಧ್ಯಕ್ಷರಾಗಿ ಮಾತಾಡುತ್ತಾರೊ ? ಇದರಲ್ಲಿ ಭಿನ್ನಾಭಿಪ್ರಾಯ ಬರುವುದಕ್ಕೆ ಸಾಧ್ಯವಿದೆ. ಆದ್ದರಿಂದ ಇವರು ಎಲ್ಲಿಯವರೆಗೆ ಅಧ್ಯಕ್ಷರಾಗಿರುತ್ತಾರೋ, ಅಲ್ಲಿನವರೆಗೆ ಈ ದೇಶದ ಆಗುಹೋಗುಗಳನ್ನು ಸರಿಯಾಗಿ ನೋಡಿಕೊಂಡು ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಕೇಂದ್ರದಿಂದ ಒತ್ತಾಯ ಬಂದರೆ, ಹಾಗೂ ಇನ್ನಿತರ ಕಡೆಗಳಿಂದ ಈ ಗಡಿ ವಿಚಾರದಲ್ಲಿ ಒತ್ತಾಯ ಬಂದರೆ, ನಿಜವಾಗಿಯೂ ಇವರು ಈಲ್ಡ್ ಆಗಬೇಕಾಗುತ್ತದೆ. ಹಾಗೆ ಆದರೆ ನಮ್ಮ ರಾಜ್ಯಕ್ಕೆ ಬಹಳ ತೊಂದರೆ ಇದೆ, ಹಾನಿ ಇದೆ. ಅದೇ ರೀತಿ ಹಿಂದಿ ಬಗ್ಗೆ, ನೀರಿನ ವಿವಾದದಲ್ಲಿ ಇವರು ರಾಜ್ಯದ ಹಿತದೃಷ್ಟಿಯಿಂದ ಏನೂ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಇವರು ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಇಟ್ಟುಕೊಂಡಿರಬೇಕಾದರೆ, ಅವರು ಹೇಳಿದಹಾಗೆ ಕೇಳಿ ಸುಮ್ಮನಿರಬೇಕಾಗುತ್ತದೆ. ಇದರಲ್ಲಿ ಅವರೆಲ್ಲರನ್ನೂ ನಿರ್ಲಕ್ಷ್ಯ ಮಾಡುವುದಕ್ಕಾಗುವುದಿಲ್ಲ; ಅವರು ಹೇಳಿದ ಮಾತುಗಳನ್ನು ಕೇಳಲೇಬೇಕಾಗುತ್ತದೆ. ಕೃಷ್ಣಾ ಗೋದಾವರಿ ನೀರಿನ ಸಮಸ್ಯೆಯಲ್ಲೂ ನಮ್ಮ ದೇಶದ ಹಿತದೃಷ್ಟಿಯಿಂದ ಎರಡು ಕೋಟಿ ಜನಗಳ ಹಿತದೃಷ್ಟಿಯಿಂದ ಈ ಸಭೆಯ ಸದಸ್ಯರೆಲ್ಲರ ಹಿತದೃಷ್ಟಿಯಿಂದ, ಅವರು ಯಾವುದಾದರೂ ಎರಡರಲ್ಲಿ ಒಂದನ್ನು ಇಟ್ಟುಕೊಳ್ಳಲಿ. ಬಹಶಃ ಇದನ್ನು ಬಿಟ್ಟು ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಹೋದರೆ ಅವರು ಅಲ್ಲಿ ಚೆನ್ನಾಗಿ ಮಾಡಬಹುದು, ಅಥವಾ ಮುಖ್ಯ ಮಂತ್ರಿಯಾಗಿ ಉಳಿದರೆ ಚೆನ್ನಾಗಿ ಮಾಡಬಹುದು. ಮೊನ್ನೆ ಕೊಚ್ಚಿನ್‌ನ ಪ್ರವಾಸ ಮಾಡಿದ್ದಾರೆ. ಆ ವಿಚಾರದಲ್ಲಿ ಮಾನ್ಯ ಸಿದ್ಧವೀರಪ್ಪನವರು ಒಂದು ಪಾಂಫ್ಲೆಟನ್ನು ಇಲ್ಲಿ ಇಟ್ಟರು. ಇವರು ಇದಕ್ಕೆಲ್ಲಾ ಖರ್ಚು ಮಾಡಿದ್ದು ಯಾರ ಹಣ ? ಕಾಂಗ್ರೆಸ್ ಪ್ರೆಸಿಡೆಂಟರಾಗಿ ಟೂರ್ ಪ್ರೋಗ್ರಾಂ ಕಳಿಸಲು ಏನು ಅಧಿಕಾರ ಇದೆ ? ಬಜೆಟ್ ಕೂಡ ಮಂಜೂರು ಮಾಡಿಲ್ಲ, ನಮ್ಮ ರೈತರ ದುಡ್ಡಿನಿಂದ ಕಾಂಗ್ರೆಸ್ಸಿನ ಅಧ್ಯಕ್ಷರ ಪ್ರವಾಸ ಏಕೆ ಮಾಡಬೇಕಿತ್ತು ? ಈ ಎರಡೂ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಅವರಿಗೆ ತಲೆ ನೋವು ಬಂದಿರುವುದು ಇದುವೇ ಕಾರಣವೆಂದು ಕಾಣುತ್ತದೆ. ಆದ್ದರಿಂದ ನಮ್ಮ ದೇಶದಲ್ಲಿ ನಮ್ಮ ಜನಗಳ ಹಿತದೃಷ್ಟಿಯಿಂದ ಇವರು ಎರಡನ್ನೂ ಮಾಡಲಾಗುವುದಿಲ್ಲ. ನಮಗೂ ಕೇಂದ್ರ ಸರ್ಕಾರಕ್ಕೂ ಅನೇಕ ರೀತಿಯಲ್ಲಿ ಭಿನ್ನಾಭಿಪ್ರಾಯವಿದೆ. ಬಹಳ ಮುಖ್ಯವಾದ ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದೆ. ಇವರು ಅದನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ. ಇದರಿಂದ ಯಾವುದಾದರೂ ಒಂದು ಬಿಟ್ಟುಬಿಟ್ಟರೆ, ಇವರಿಗೂ ಮಾನ್ಯತೆ ಇರುತ್ತದೆ, ನಮಗೂ ಇರುತ್ತದೆ ನಮ್ಮ ದೇಶದ ಹಿತದೃಷ್ಟಿಯನ್ನು ಕಾಪಾಡುವುದಕ್ಕೆ ಅವಕಾಶವಾಗುತ್ತದೆ.

ಉಪಾಧ್ಯಕ್ಷರು.—ಈಗ ಮಾನ್ಯ ಸಿದ್ಧವೀರಪ್ಪನವರು ರೂಲ್ಸ್ ಬದಿಯಲ್ಲಿಡಿ ಎಂದು ಹೇಳಿದರು. ಈ ಮನೆ ಒಪ್ಪಿದರೆ ಏನೂ ಮಾಡಬಹುದು. ರೂಲ್ಸ್ ರದ್ದು ಮಾಡಬೇಕೆಂದಿದ್ದರೆ ಹೇಳಿ. ಸಭೆಯ ಕಾರ್ಯಕಲಾಪಗಳನ್ನು ಮುಂದುವರಿಸಬೇಕೋ, ಅಥವಾ ಸಭೆಯನ್ನು ಅಜರ್ನ್ ಮಾಡಬೇಕೋ, ಯಾವುದನ್ನೂ ಸಭೆಯ ಒಪ್ಪಿಗೆ ಪಡೆದು ಮಾಡಬೇಕು.

ಶ್ರೀ ಎಸ್. ಶಿವಪ್ಪ.—ಈಗ ಸುಮಾರು ಎರಡು ಗಂಟೆಯ ಹಿಂದೆ ಈ ವಿಚಾರದ ಚರ್ಚೆ ಪ್ರಾರಂಭವಾಯಿತು. ಚರ್ಚೆ ತೆಗೆದುಕೊಳ್ಳಬೇಕೋ, ಬಿಡಬೇಕೋ ಎಂಬುದು ಇಲ್ಲವೇಇಲ್ಲ. ಸ್ಪೀಕರ್ ಒಪ್ಪಿಕೊಂಡು ಬಿಟ್ಟಿದ್ದಾರೆ. ವಿರಾಮ ವೇಳೆಯಲ್ಲಿ ಮಾನ್ಯ ಮುಖ್ಯಮಂತ್ರಿಯವರೊಡನೆ ಮಾತನಾಡೋಣ, ಆ ಮೇಲೆ ವಿಚಾರ ಮಾಡೋಣ ಎನ್ನುವ ವಿಚಾರ ಇತ್ತು. ಹಾಗೆ ಚರ್ಚೆಗೆ ಪ್ರಾರಂಭವಾಗಿದೆ. ಇದು ಬೆಳಗಾಗುವ ತನಕ ರಾಮಾಯಣ ಕೇಳಿ, ಬೆಳಿಗ್ಗೆ ಸೀತೆ ರಾಮನಿಗೆ ಏನಾಗಬೇಕೆಂದು ಕೇಳಿದ ಹಾಗಾಯಿತು. ಮುಖ್ಯಮಂತ್ರಿಯವರೊಡನೆ ಚರ್ಚೆಯಾದಮೇಲೆ ಹೇಳಿಕೆ

(ಶ್ರೀ ಎಸ್. ಶಿವಪ್ಪ)

ಕೊಡಿಸುತ್ತೇನೆ ಎಂದು ಹೇಳಿದ್ದಾರೆ. ಈಗ ಮುಖ್ಯಮಂತ್ರಿಯವರು ಬರುವವರೆಗೆ, ಈ ಚರ್ಚೆ ಮುಂದುವರಿಯಬೇಕು. ಅದಲ್ಲದೆ ಬೇರೆ ಗತ್ಯಂತರವಿಲ್ಲ. ಈಗ ಬಂದು ಹೇಳಿಕೆ ನೀಡಿದರೆ, ಬಹಳ ಒಳ್ಳೆಯದು. ಅವರಿಗೆ ಬರಲು ಸಾಧ್ಯವಿಲ್ಲದೆ ಇದ್ದರೆ ಬರುವ ತನಕ ಮುಂದುವರಿಸೋಣ ; ಮುಂದುವರಿಸಬಹುದು ಎಂದು ಸಭಾಪತಿಯವರು ಹೇಳಿದ್ದಾರೆ.

ಉಪಾಧ್ಯಕ್ಷರು.—ಈಗ ಚರ್ಚೆಗೆ ಅವಕಾಶ ಕೊಡಬೇಕೆಂದು ಹೇಳಿಲ್ಲ. ತಾವು ಈಗ ಹೇಳುವುದು ಸರಿಯಲ್ಲ. ಮುಂದಿನ ಕಾರ್ಯಕಲಾಪಗಳನ್ನು ನಡೆಸೋಣ. ಮುಖ್ಯಮಂತ್ರಿಯವರು ಬರುತ್ತಾರೋ ಇಲ್ಲವೋ, ತಿಳಿದು ಹೇಳುತ್ತೇನೆ. ಅವರಿಗೆ ದೇಹಕ್ಕೆ ಅಸೌಖ್ಯವಿರುವುದರಿಂದ ನಾನು ಹೇಳಿದ್ದು. ಮಾನ್ಯ ಸಿದ್ಧವೀರಪ್ಪನವರು ಒಂದು ಮಾತು ಹೇಳಿದರು "you must see democracy is functioning here"...ಎಂದು......

ಶ್ರೀ ಎಸ್. ಶಿವಪ್ಪ.—ಇರತಕ್ಕ ರೂಲ್ಸ್ ಅಡಚಣೆ ಆದರೆ ಅದನ್ನು ಸಸ್ಪೆಂಡ್ ಮಾಡುವುದಕ್ಕೆ ಅಧಿಕಾರ ಇದೆ.

ಉಪಸಭಾಧ್ಯಕ್ಷರು.—ಅದು ಮಾನ್ಯ ಸಭೆಗೆ ಅಧಿಕಾರ ಇರುವುದು.

† ಶ್ರೀ ಎಸ್. ಗೋಪಾಲಗೌಡ.—ಮಾನ್ಯ ಉಪಸಭಾಧ್ಯಕ್ಷರೇ, ಈ ಗೊಂದಲಕ್ಕೆ ಕಾರಣ ನಾವಲ್ಲ. ಶ್ರೀಮಾನ್ ಕೊತವಾಲೆಯವರು ಹೇಳಿದಂತೆ. ಸ್ಕೂಲ್ ವಿದ್ಯಾರ್ಥಿಗಳಂತೆ ವರ್ತಿಸಬೇಕು ಎಂಬುದು ನಮ್ಮ ಅಭಿಪ್ರಾಯವೂ ಅಲ್ಲ, ಅವರ ಅಭಿಪ್ರಾಯವೂ ಅಲ್ಲ. ಅಥವಾ ಶ್ರೀಮಾನ್ ಕಂಠಿಯವರು ಹೇಳಿದಂತೆ, ವಿರೋಧ ಪಕ್ಷದ ಸದಸ್ಯರಿಗೆ ಈ ವಿಷಯದಲ್ಲಿ ಏನೂ ಕರ್ತವ್ಯವಿಲ್ಲವೆಂದು ಹೇಳಿದ್ದಾರೆ. "No duty is cast upon the Opposition" ಅದು ನಮಗೆ ಸಂಬಂಧಪಟ್ಟದ್ದು ಎಂದು ಹೇಳಿದ್ದಾರೆ. ತಾವು ಹೇಳಿದ ಪ್ರಕಾರ, ಸಭಾಪತಿಯವರೇ ಬಂದು ಹೇಳಿಕೆ ಕೊಡುತ್ತಾರೆ, ಅಲ್ಲಿಯವರೆಗೆ ಮಿಕ್ಕಿದ್ದ ಕೆಲಸ ಮಾಡೋಣ ಎಂದು ಹೇಳುವುದು ಇಲ್ಲಿ ಮುಖ್ಯವಲ್ಲ. ಈ ವಿಷಯ ಎಂದರೆ, ಬಹಳ ಗಂಭೀರವಾದುದು. ಇದನ್ನು ತಾವು ಗ್ರಹಿಸಿದ್ದೀರಿ, ರಾಜ್ಯದ ಜನ ಗ್ರಹಿಸಿದ್ದಾರೆ ; ಮಾನ್ಯ ಸಭೆಯ ಸದಸ್ಯರು ಗ್ರಹಿಸಿದ್ದಾರೆ. ಶ್ರೀಮಾನ್ ರಾಮರಾಯರು ಗೃಹ ಮಂತ್ರಿಪದವಿಗೆ ರಾಜಿನಾಮೆ ಕೊಟ್ಟಿದ್ದಾರೆಂದು ಊಹಾಪೋಹಗಳು ಇವೆ. ಇದು ಒಂದು ಅನಿಶ್ಚಿತವಾದ, ಅವಮಾನಕರವಾದ ಪರಿಸ್ಥಿತಿ. ಯಾವುದೇ ಸರ್ಕಾರದ ಗೃಹಮಂತ್ರಿಗಳು ರಾಜಿನಾಮೆ ಕೊಟ್ಟಿದ್ದರೆ ಅದು ಗೃಹಕೃತ್ಯದ ವಿಷಯವಲ್ಲ. ಅದು ರಾಜ್ಯಕ್ಕೆ ಸಂಬಂಧಪಟ್ಟ, ಗಂಭೀರವಾದ ವಿಚಾರ. ಅದನ್ನು ಗಂಭೀರವಾಗಿ ವಿಚಾರಮಾಡಿ, ಅದಕ್ಕೆ ಆಜ್ಞೆ ಹೊರಡಿಸಿ, ಆ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟು, ಇದರಲ್ಲಿ ರಾಜ್ಯದ ಹಿತಾಸಕ್ತಿಗಳಿಗೆ ಏನೂ ತೊಂದರೆ ಯಾಗಿಲ್ಲ, ರಾಜ್ಯದ ಬೊಕ್ಕಸವನ್ನು ಲೂಟಿ ಹೊಡೆದು ಓಡಿ ಹೋಗುತ್ತಿಲ್ಲ, ಅವರ ವೈಯಕ್ತಿಕ ಕಾರಣಗಳಿಗೆ ರಾಜಿನಾಮೆ ಕೊಟ್ಟಿದ್ದಾರೆ, ಅಥವಾ ಕ್ರಿಮಿನಲ್ ಕೇಸಿನಲ್ಲಿ ನೇರವಾಗಿ ಸಂಬಂಧಪಟ್ಟು ಹೋಗುತ್ತಿಲ್ಲ, ತನ್ನ ಸ್ವಂತ ಕಾರಣಕ್ಕಾಗಿ ಹೋಗುತ್ತಿದ್ದಾರೆ ಎಂದು ಹೇಳಬೇಕು. ಇದು ನಮ್ಮ ನಮ್ಮ ಮನೆಯಲ್ಲಿ ಮಾಡುವಂತಹ ವಿಚಾರವಲ್ಲ. ಇದು ರಾಜ್ಯದ ವಿಧಾನ ಸಭೆ. ಒಂದು ವೇಳೆ, ಇಲ್ಲಿ ಮಾನ್ಯ ಸದಸ್ಯರು ನನ್ನ ಮೇಲೆಯೂ ಏನಾದರೂ ಅಪಾದನೆ ಮಾಡಿದರೆ, ಅದಕ್ಕೆ ನಾನು ಸಂಬಂಧಪಟ್ಟಿಲ್ಲವೆಂದು ಸಭೆಯಲ್ಲಿ ಹೇಳಬೇಕು. ಹೀಗಿರುವಾಗ ನಮ್ಮ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಇಲ್ಲಿ ಒಂದು ರೀತಿ ಯಾದ ಪೊಳ್ಳು ಹೇಳಿಕೆಯನ್ನು ಕೊಟ್ಟರು. ಅವರು ಯಾವಾಗಲೂ ಹಾಗೇ ಒಂದು ರೀತಿ ಯಾದ ಪೊಳ್ಳು ಹೇಳಿಕೆಗಳನ್ನು ಕೊಟ್ಟುಬಿಡುತ್ತಾರೆ. ತಾತ್ಕಾಲಿಕವಾಗಿ ನಾವೂ ಕೂಡ ಅದನ್ನು ಒಪ್ಪಿಕೊಂಡೆವು. ಇದರ ಜೊತೆಗೆ ಜನಗಳಲ್ಲಿ ಒಂದು ರೀತಿಯಾದ ಪರಿಸ್ಥಿತಿ ಒಂದು ಒದಗಿದೆ. ಅದು ಶ್ರೀ ನಿಜಲಿಂಗಪ್ಪನವರು ಈ ದೇಶದ ಜನಗಳ ನಾಯಕರೇ ಅಲ್ಲವೇ ಎನ್ನುವುದು ಒಂದು ರೀತಿಯಾದ ವಿವಾದಗ್ರಸ್ತವಾದ ವಿಷಯವಾಗಿದೆ. ಅಲ್ಲದೆ ಇದರ ಬಗ್ಗೆ ನಾನಾ ರೀತಿಯಲ್ಲಿ ಹೇಳಿಕೆಗಳು ಬರುತ್ತಿವೆ. ಇದು ಒಂದು ಮಹತ್ವಪೂರ್ಣವಾದ ಸಂಗತಿ. ಶ್ರೀಮಾನ್ ನಿಜಲಿಂಗಪ್ಪನವರಿಗೂ ಬೇಕಾದರೆ ನೀವು ಕಾಲಾವಕಾಶ ಕೊಡಿ. ಅವರು ಎಲ್ಲವನ್ನೂ ಗಮನಕ್ಕೆ ತೆಗೆದುಕೊಂಡು ಈ ಸಭೆಗೆ ಬಂದು ಒಂದು ಹೇಳಿಕೆಯನ್ನು ಕೊಡುತ್ತಾರೆಂದು ನಾವೆಲ್ಲ ಇಂದು ಭಾವಿಸಿದ್ದೆವು ಅಂತಹ ಯಾವ ಹೇಳಿಕೆಯನ್ನೂ ಇಲ್ಲಿ ಕೊಡಲಿಲ್ಲ. ಇವೊತ್ತು ಗೃಹ ಮಂತ್ರಿಗಳ ಸ್ಥಾನವನ್ನೂ ಅವರೇ ವಹಿಸಿಕೊಂಡಿರುವುದರಿಂದ ಅವರು ಇಂದು ಈ ಸಭೆಗೆ ಜವಾಬುದಾರರಾಗಿರುತ್ತಾರೆ. ಇದೇನು ನಮ್ಮ ಮನೆಯ ವಿಷಯವೇ ? ನಮ್ಮಗಳ ಮನೆಯಲ್ಲೂ

ಕೂಡ ಕೆಲಸ ಮಾಡುವಾಗ ಕೆಲಸಕ್ಕೆ ನೌಕರರನ್ನು ನೇಮಿಸಲು ತಡ ಮಾಡಿದರೆ ಕೆಲವು ವೇಳೆ ಹೆಂಗಸರು ಸಿಟ್ಟಿಗೆದ್ದು ಇದೇನು ನಿಮಗೇನು ತಲೆಗಿಲೆ ಕೆಟ್ಟು ಹೋಗಿದೆಯೇನು ಎಂದು ಅವರೂ ಕೂಡ ಒಂದು ವೇಳೆ ಸೌಟನ್ನು ತೆಗೆದುಕೊಂಡು ಯಜಮಾನನ ತಲೆ ಮೇಲೆ ಹೊಡೆಯುವಷ್ಟರ ಮಟ್ಟಿಗೆ ಹೋಗುತ್ತಾರೆ. ಮತ್ತು ನಿಮಗೆ ಸರಿಯಾಗಿ ಕೆಲಸ ಮಾಡುವುದಕ್ಕೆ ಬರುವುದಿಲ್ಲ. ಎಂದು ತಲೆ ಕುಕ್ಕುತ್ತಾರೆ. ಆದುದರಿಂದ ಇನ್ನು ಮೇಲೆ ಸೀರೆಗಳನ್ನೆಲ್ಲಾ ನೀವೇ ಒಗೆಯಬೇಕು ಎಂದು ಹೇಳುತ್ತಾರೆ. (ನಗು) ಇದನ್ನು ನಾನು ನಮ್ಮ ಅನುಭವದಿಂದ ಹೇಳುತ್ತಿದ್ದೇನೆ. ಇಲ್ಲ ಯಾವ ಬೇರೆ ಒಂದು ಉದ್ದೇಶವನ್ನು ಇಟ್ಟುಕೊಂಡು ಇಂದಿನ ಚರ್ಚೆಯನ್ನು ಆರಂಭ ಮಾಡಬೇಕೆಂದು ಹೇಳಿದ್ದೇವೋ ಅದನ್ನು ಆಗಲೇ ಹೇಳಿದ್ದೇನೆ. ತಾವು ಇದನ್ನು ಬೇರೆ ಯಾವ ರೀತಿಯಲ್ಲೂ ಭಾವಿಸಬಾರದು. ದೇಶದಲ್ಲಿರುವ ಜನ ಇಂದು ಇರುವ ಕಾಂಗ್ರೆಸ್ಸು ಪಕ್ಷದ ಆಡಳಿತ ಇದ್ದರೂ ದೇಶದ ಜನತೆಗೆ ಬೇಕಾದ ಅನುಕೂಲಗಳನ್ನು ಮಾಡಿಕೊಡಲು ಇಂದು ಇರುವ ರಾಜ್ಯ ಸರಕಾರ ನ್ಯಾಯವಾದ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಶ್ರೀಮಾನ್ ನಿಂಜಲಿಂಗಪ್ಪ ನವರು ಈ ರಾಜ್ಯದ ಮುಖ್ಯ ಮಂತ್ರಿಗಳಾಗಿ ಇನ್ನು ಬಹಳ ಕಡಿಮೆ ದಿವಸಗಳು ಇರುತ್ತಾರೆ ಎಂದು ಜನ ಹೇಳುತ್ತಿದ್ದಾರೆ. ತಾವೇ ಇಂದು ಇರುವ ಪರಿಸ್ಥಿತಿಯನ್ನು ನೋಡ ಬಹುದು. ಮಾನ್ಯ ಮುಖ್ಯ ಮಂತ್ರಿಗಳ ಬಳಿ ಹೋಗಿ ಕೆಲವು ಗಂಭೀರವಾದ ವಿಚಾರಗಳನ್ನು ಪ್ರಸ್ತಾಪಿಸಲು ಅವರ ಬೇಟಿ ಪಡೆಯಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಒಂದು ಮುಖ್ಯವಾದ ಕಾಗದಕ್ಕೆ ರುಜು ಹಾಕಬೇಕಾದರೆ ಅವರಿಂದ ಆಗುತ್ತಿಲ್ಲ ಅವರು ಹಾಗೆ ರುಜು ಹಾಕದೇ ಹೋದರೆ ಅದು ಕಾಲಾತೀತವಾಗುತ್ತದೆ ಇಲ್ಲದೇ ಇದ್ದರೆ ಅವರನ್ನು ಹುಡಿಕಿಕೊಂಡು ಹೋಗ ಬೇಕಾದರೆ ಅವರ ಬಾಲ ಹಿಡಿದುಕೊಂಡು ದೆಹಲಿಗೆ ಇಲ್ಲಿನ ಅಧಿಕಾರಿಗಳು ಹೋಗುವುದಕ್ಕಾ ಗುತ್ತದೆಯೇ ? ಸೆಕ್ರೆಟರಿಗಳಾಗಿರುವವರು ಎಷ್ಟು ಮಟ್ಟಿಗೆ ಹೇಳಬಹುದೋ ಅಷ್ಟನ್ನು ಹೇಳಬಹುದು. ಚೀಫ್ ಸೆಕ್ರೆಟರಿಗಳಾಗಿರುವವರೂ ಕೂಡ ಹೇಳಬಹುದು. ಗೃಹ ಮಂತ್ರಿಗಳಾಗಿರುವುದರಿಂದ ಸೆಕ್ರೆಟೇರಿಯಟ್ ಫೈಲುಗಳನ್ನೆಲ್ಲಾ ಅಲ್ಲಿನ ಸೆಕ್ರೆಟರಿಯವರು ಅವರ ಮನೆಗೆ ಹೊತ್ತುಕೊಂಡು ಹೋಗಲು ಸಾಧ್ಯವೇ ? ಇದಕ್ಕೆಲ್ಲಾ ಒಂದು ಕ್ರಮಬದ್ಧವಾದ ರೂಲ್ಸುಗಳಿವೆ ಅದರಂತೆ ಕೆಲಸ ಗಳನ್ನು ಮಾಡಿಕೊಂಡು ಹೋಗಬೇಕಾಗುತ್ತದೆ. ಶ್ರೀಮಾನ್ ನಿಜಲಿಂಗಪ್ಪನವರು ಇಂದು ಅಖಿಲ ಭಾರತ ಕಾಂಗ್ರೆಸ್ಸು ಪಕ್ಷದ ಅಧ್ಯಕ್ಷರಾಗಿರುವುದರಿಂದ ಅವರ ಕೈಕೆಳಗೆ ಪ್ರಧಾನ ಮಂತ್ರಿಯವರು, ಉಪ ಪ್ರಧಾನಿಯವರು ಹಾಗೂ ಬೇರೆ ರಾಜ್ಯಗಳು ಕಾಂಗ್ರೆಸ್ಸು ಪಕ್ಷದ ಮುಖ್ಯ ಮಂತ್ರಿಗಳು ಎಲ್ಲರೂ ತಮ್ಮ ಅಧೀನದಲ್ಲಿದ್ದಾರೆಂದು ಮತ್ತು ಇವರು ಹೇಳಿದಹಾಗೆ ಅವರೂ ಕೇಳಿಕೊಂಡು ಇರುತ್ತಾರೆ ಎಂದು ಹೇಳಬಹುದು. ಇದಕ್ಕಾಗಿ ನಾನು ಆಗಲೇ ಹೇಳಿದಹಾಗೆ ಇದನ್ನೆಲ್ಲಾ ಸ್ವಲ್ಪ ಅಡಜಸ್ಟ್ ಮಾಡಿಕೊಂಡು ಹೋಗುತ್ತಾರೆಂದು ಹೇಳಬಹುದು. ಆದರೆ ಆ ರೀತಿ ಅಡಜಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಇದಕ್ಕಾಗಿ ಕ್ಯಾಬಿನೆಟ್ಟಿನ ಏನು ಒಂದು ನಡವಳಿಕೆಗಳು ಇವೆ ಅದಕ್ಕನುಸಾರವಾಗಿಯೇ ಹೋಗಬೇಕು. ನಿಜವಾಗಿಯೂ ಇಂದು ದೇಶದಲ್ಲಿ ಬಹು ಗಂಭೀರವಾದ ಪರಿಸ್ಥಿತಿ ಇದೆ. ಮುಖ್ಯ ಮಂತ್ರಿಗಳು ಯಾವ ರೀತಿಯಾದ ಕೆಲಸಗಳನ್ನು ಮಾಡಿಕೊಂಡು ಹೋಗಬೇಕು ಎನ್ನುವುದಕ್ಕೆಲ್ಲಾ ನೀತಿ ನಿಯಮಗಳಿವೆ. ಇದರ ಬಗ್ಗೆ ಮಾತಾಡುವಾಗ ಮಾನ್ಯ ಮಂತ್ರಿಗಳಾದ ಶ್ರೀಮಾನ್ ಕಂಠಿಯವರು ಕಾಂಗ್ರೆಸ್ ಸದಸ್ಯರುಗಳೆಲ್ಲರ ಅಭಿಪ್ರಾಯದಲ್ಲಿ ಇವರೇ ಮುಖ್ಯ ಮಂತ್ರಿಗಳಾಗಿ ಇರಬಹುದು. ಎನ್ನುವ ಅರ್ಥ ಬರುವಂತೆ ಹೇಳಿರುವುದನ್ನು ತಾವು ಖಂಡಿತ ಗಮನಕ್ಕೆ ತೆಗೆದುಕೊಳ್ಳಬಾರದು. ತಮಗೂ ಗೊತ್ತು, ಸಭೆಯಲ್ಲಿರುವ ಎಲ್ಲ ಜನಗಳ ಅಭಿಪ್ರಾಯದಂತೆ ನೋಡುವುದಾದರೆ ನಿಮ್ಮಲ್ಲಿ ಮುಖ್ಯ ಮಂತ್ರಿಗಳನ್ನಾಗಿ ಆಯ್ಕೆ ಮಾಡಲು ಅರ್ಹರಾದ ಜನರಿಲ್ಲವೇನು ಅಥವಾ ಅಂತಹ ಗಂಡಾಂ ತರದ ಪರಿಸ್ಥಿತಿ ಏನಾದರೂ ತಮಗೆ ಬಂದಿದೆಯೇನು ? ತಾತ್ಕಾಲಿಕವಾಗಿ ಇವರೇ ಮುಖ್ಯ ಮಂತ್ರಿ ಗಳಾಗಿರಬೇಕೆಂದು ಹೇಳುವುದರಲ್ಲಿ ಅರ್ಥವೇನು ? ಅಲ್ಲದೆ ಮಾನ್ಯ ಕಂಠಿಯವರು ಇಲ್ಲಿ ಹೇಳುವಾಗ ವಿರೋಧ ಪಕ್ಷದವರಿಗೆ ಇದರಲ್ಲೇನೂ ಜವಾಬುದಾರಿಯಿಲ್ಲ ಎನ್ನುವ ಅರ್ಥ ಬರುವಂತೆ ಹೇಳಿದರು. ನಮಗೂ ಜವಾಬುದಾರಿಗಳಿವೆ. ವಿರೋಧ ಪಕ್ಷದವರಾಗಿದ್ದರೂ ನಾವು ಸರಕಾರವನ್ನು ರಚನೆ ಮಾಡುವುದಕ್ಕೆ ಕೆಲವು ತಾತ್ಕಾಲಿಕವಾದ ಅಡಚಣೆಗಳಿರುವುದರಿಂದಾಗಿ ನಾವು ಸರಕಾರವನ್ನು ರಚಿಸದೇ ಇದ್ದರೂ ತಾವು ಹೆಚ್ಚು ಸಂಖ್ಯೆಯಲ್ಲಿದ್ದೇವೆ ಎಂದು ಇಲ್ಲಿ ಸರ್ಕಾರವನ್ನು ಪ್ರಜಾ ಪ್ರಭುತ್ವದ ತತ್ವಕ್ಕನುಸಾರವಾಗಿ ರಚನೆ ಮಾಡಿರುವುದರಿಂದ ರಾಜ್ಯಾಂಗಬದ್ಧವಾಗಿ ಅದರ ನೀತಿಗಳಿಗನು ಸಾರವಾಗಿ ಆಡಳಿತವನ್ನು ನಡೆಸಬೇಕು. ಹಾಗಿಲ್ಲದೆ ಜನಕ್ಕೆ ವಿರೋಧವಾಗಿ ಅಧಿಕಾರ ನಡೆಸುತ್ತಾ ಹೋದರೆ ಮುಂದೆ ಜನರೇ ಅಠಾರಾ ಕಚೇರಿಗೆ ನುಗ್ಗಿ ನಿಮ್ಮನ್ನು ಅಧಿಕಾರದಿಂದ ಕಿತ್ತು ಅವರೇ ಆಡಳಿತ ನಡೆಸಬಹುದು. ಒಂದು ನಿರ್ದಿಷ್ಟವಾದ ತತ್ವಕ್ಕನುಸಾರವಾಗಿ ಪ್ರಜಾಪ್ರಭುತ್ವದ ಧೋರಣೆಗಳಿಗೆ ಅನುಸಾರವಾಗಿ ನಡೆದುಕೊಂಡು ಹೋಗಬೇಕಾಗುತ್ತದೆ. ಇದರ ಬಗ್ಗೆ ನೀವು ಇಲ್ಲಿ ಹೇಳಲು ನಮಗೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದರಂತೆ ನಾವು ಕೂಡ ನಿಮ್ಮ ಮುಂದೆ ನಮ್ಮ

(ಶ್ರೀ ಎಸ್. ಗೋಪಾಲಗೌಡ)

ಅಭಿಪ್ರಾಯಗಳನ್ನು ಇಟ್ಟುಬಿಟ್ಟಿದ್ದೇವೆ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದು ಇಷ್ಟೇ. ಇದು ನಿಜಲಿಂಗಪ್ಪನವರಿಗೆ ಸಂಬಂಧಪಟ್ಟ ಪ್ರಶ್ನೆಯಲ್ಲ, ರಾಜ್ಯಕ್ಕೆ ಸಂಬಂಧಪಟ್ಟ ಪ್ರಶ್ನೆ. ರಾಜ್ಯದ ಜನತೆಯು ಹಣ ಕೊಟ್ಟಿರುವುದರಿಂದ ನೇರವಾಗಿ ಇದು ಜನತೆಗೆ ಸಂಬಂಧಪಟ್ಟವರ ವಿಷಯವಾಗಿರುವುದರಿಂದ ಇಂದು ಶ್ರೀ ನಿಜಲಿಂಗಪ್ಪನವರು ಇಲ್ಲಿ ಮುಖ್ಯ ಮಂತ್ರಿಗಳಾಗಿ ಮುಂದುವರಿಯಬೇಕೇ ಅಥವಾ ಅವರೇ ಕಾಂಗ್ರೆಸ್ ಅಧ್ಯಕ್ಷರಾಗಿ ಮುಂದುವರಿಯುತ್ತಾರೋ ಇದರ ಬಗ್ಗೆ ಒಂದು ನಿರ್ದಿಷ್ಟವಾದ ತೀರ್ಮಾನವನ್ನು ಈಗಲೇ ಮಾಡಬೇಕು. ಇದು ಅವರಿಗೇ ಸಂಬಂಧಪಟ್ಟ ವಿಚಾರ. ಅವರ ಪಕ್ಷದಲ್ಲಿ ಯಾವ ರೀತಿ ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಬರಲಿ. ಅವರ ತೀರ್ಮಾನಕ್ಕೆ ನಾವು ಕೂಡ ಬದ್ಧರಾಗಿರುತ್ತೇವೆ. ಹಿಂದೆ ಒಂದು ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ಧವೀರಪ್ಪನವರು ಶ್ರೀಮಾನ್ ರಾಚಯ್ಯನವರನ್ನು ನಾಯಕರನ್ನಾಗಿ ಆರಿಸಬಹುದು ಎಂದು ಒಂದು ಸೂಚನೆ ಕೊಟ್ಟಿದ್ದರು. ಆದರೆ ನಾನು ಇಲ್ಲಿ ಈಗ ಯಾವ ಸೂಚನೆಯನ್ನೂ ಕೊಡುತ್ತಿಲ್ಲ. ನಾನು ಯಾರ ಬಗ್ಗೆಯೂ ಹೇಳುವುದಕ್ಕೆ ಹೋಗುವುದಿಲ್ಲ. ಇದು ನಿಮಗೆ ಸಂಬಂಧಪಟ್ಟ ವಿಚಾರ. ಇದಕ್ಕೆ ನಾವು ಪ್ರವೇಶ ಮಾಡುವುದಿಲ್ಲ. ನೀವೇ ಯಾರನ್ನು ಬೇಕಾದರೂ ಆರಿಸಿ. ಅರಸರೇ ಬರಲಿ, ರಾಚಯ್ಯನವರೇ ಬರಲಿ ಇಲ್ಲವೇ ವೀರೇಂದ್ರ ಪಾಟೀಲರೇ ಬರಲಿ, ಇದು ನಮಗೆ ಸಂಬಂಧಪಟ್ಟದ್ದಲ್ಲ, ನಿಜವಾಗಿಯೂ ಇದು ನಿಮಗೆ ಬಿಟ್ಟ ವಿಷಯ. ಆದರೆ ನಮಗೆ ಇಲ್ಲಿ ಮುಖ್ಯವಾಗಿ ಬೇಕಾಗಿರುವುದು, ಈ ದೇಶಕ್ಕೆ ಹಾಗೂ ಈ ಸಭೆಗೆ ಒಬ್ಬರು ನಾಯಕರು ಇರಬೇಕು ಮತ್ತು ದೇಶದ ಜನತೆಗೆ ಒಬ್ಬರು ಮುಖ್ಯ ಮಂತ್ರಿಗಳಾಗಿರಬೇಕು. ಆದುದರಿಂದ ನಾನು ಕೇಳುವುದು ಇಷ್ಟು, ಹೇಗಾದರೂ ಮಾಡಿ ಇಂದು ದೇಶದ ಮುಂದಿರುವ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸುವಂತಹ ನಾಯಕರು ನಮಗೆ ಬೇಕು. ದೇಶದ ಮುಂದಿರುವ ಮುಖ್ಯ ಸಮಸ್ಯೆಗಳನ್ನು ಬಗೆಹರಿಸಬೇಕು. ಮತ್ತು ಇನ್ನು ಮುಂದೆ ದೇಶದ ಬಡ್ಜೆಟ್ಟು ಕೂಡ ಬರುತ್ತದೆ. ದೇಶದ ಹಣದ ಗಂಟನ್ನು ಜನ ಇಂದು ಈಗ ಮುಖ್ಯ ಮಂತ್ರಿಗಳಾಗಿರುವ ನಿಜಲಿಂಗಪ್ಪನವರ ಕೈಗೆ ಕೊಡಲು ಇಚ್ಛಿಸುತ್ತಿಲ್ಲ ಹಾಗೆ ದೇಶದ ಹಣದ ಗಂಟನ್ನು ಇವರ ಕೈಗೆ ಕೊಟ್ಟರೆ ಹಾಳಾಗಿ ಹೋಗುತ್ತದೆ. ಆ ರೀತಿಯಾಗಬಾರದು. ಇದನ್ನು ಗಂಭೀರವಾಗಿ ಪರ್ಯಾಲೋಚಿಸಿ ಈ ದೇಶದ ಜನರ ಅಭಿಪ್ರಾಯಗಳಿಗೆ ಮನ್ನಣೆ ಕೊಟ್ಟು ಎಲ್ಲ ಕಾರ್ಯಕಲಾಪಗಳನ್ನೂ ಸುಸೂತ್ರವಾಗಿ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಇಲ್ಲಿ ಹೇಳಲು ಇಚ್ಛಿಸುತ್ತೇನೆ. ಇದರಲ್ಲಿ ನಮ್ಮ ಹಕ್ಕು ಏನಿದೆ ಎನ್ನುವುದನ್ನು ತೋರಿಸುವುದಕ್ಕಾಗಿ ಇಷ್ಟು ಹೊತ್ತು ಇಲ್ಲಿ ಚರ್ಚೆಮಾಡಬೇಕಾಗಿ ಬಂತು. ಯಾವಾಗಲೂ ಒಂದು ಕಾನೂನು ಪ್ರಕಾರ ರೂಲ್ಸು ಪ್ರಕಾರ ಕಾರ್ಯಕಲಾಪಗಳನ್ನು ಮಾಡಬೇಕೆನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಇದರಿಂದ ಕಾಲವ್ಯಯ ಮಾಡಿ ಚರ್ಚೆ ಮಾಡುತ್ತಿದ್ದಾರೆ ಎಂದು ಯಾರೂ ಭಾವಿಸಬಾರದು. ಮೇಲಾಗಿ ನಾವು ಪ್ರಜಾಪ್ರಭುತ್ವದ ಒಂದು ಲಗಾಮನ್ನು ಹಿಡಿದಿರುವುದರಿಂದ ಅದಕ್ಕನುಸಾರವಾಗಿ ನಾವು ನಡೆಯಲೇಬೇಕಾಗುತ್ತದೆ. ಅದರಲ್ಲಿರುವ ರೂಲ್ಸನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲ. ಇದರಲ್ಲಿರುವ ಪ್ರೊಸೀಜರಿನಂತೆಯೇ ನಾವು ಹೇಳುತ್ತಿರುವುದು. ಮಾನ್ಯ ಗೃಹ ಮಂತ್ರಿಗಳು ರಾಜೀನಾಮೆ ಕೊಟ್ಟಿರುವಾಗ ಸಾಧಾರಣವಾಗಿ ಮುಖ್ಯ ಮಂತ್ರಿಗಳಾಗಿರುವವರು ಇಲ್ಲಿಗೆ ಬಂದು ಒಂದು ಹೇಳಿಕೆಕೊಡುವ ಒಂದು ಸಂಪ್ರದಾಯ ಇದೆ. ಆದುದರಿಂದ ನಾಳೆ ಇಲ್ಲಿಗೆ ಮುಖ್ಯ ಮಂತ್ರಿಗಳು ಬರುತ್ತಾರೆ. ಅವರು ಆಗ ಏನು ಹೇಳುತ್ತಾರೋ ಕೇಳೋಣ. ಅಲ್ಲಿಯವರಗೆ ಈ ಚರ್ಚೆಯನ್ನು ಮುಂದುವರಿಸಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ.

Mr. DEPUTY SPEAKER.—Very bad precedent and bad convention.

† **Sri M. NAGAPPA**.—I have raised a point of order and I am substantiating that Sir. I have already explained that without the Chief Minister further proceedings cannot be taken up under rule 18(2) which is not controlled by any other rule except article 176 of the Constitution because that Chapter has been framed as per provisions of article 176.

5.00 P. M.

Rule 18(2) of the Rules of Procedure says :

" The Speaker shall, in consultation with the Leader of the

House, allot time for the discussion of the matters referred to in the Governor's Address to the Houses under Article 176 of Constitution. "

Mr. DEPUTY SPEAKER.—Which is the Rule which rule says that the Chief Minister should be present ?'

Sri M. NAGAPPA.—The Leader of the House is not present here. If he were here, we could have known whether there was any discussion between him and the Speaker and then time fixed after consultation between the two persons. After knowing that fact alone proceedings can be taken up.

Mr. DEPUTY SPEAKER—The points raised were already met. It is only in consultation with the Leader of the House, this agenda has been framed.

Sri M. NAGAPPA.—The rules in Chapter V of the Rules of Procedure are framed under Article 176 of the Constitution. I will read Art. 176 of the Constitution ;

> "(1) At the commencement of the first session after each general election to the Legislative Assembly and at the commencement of the first session of each year the Governor shall address the Legislative Assembly or, in the case of a State having a Legislative Council, both Houses assembled together and inform the Legislature of the causes of its summons.
>
> "(2) Provision shall be made by the rules regulating the procedure of the House or either House for the allotment of time for discussion of the matters referred to in such address''.

So, under Art. 176(2) of the Constitution, Clauses 20 to 26 and other Rules of these Rules of Procedure have been framed. They are also governed by Rule 208 of the Constitution.

Mr. DEPUTY SPEAKER.—I want to know which rule has been violated ?

Sri M. NAGAPPA.—Rule 18 (2) read with Rule 311 of the Rules of Procedure and Art. 176(2) of the Constitution have been violated. Unless the time for the discussion of the Governor's Address is fixed by the Speaker in consultation with the Leader of the House, no further proceedings can be taken up.

Mr. DEPUTY SPEAKER.—That has been done already.

Sri M. NAGAPPA.—I will come to Art. 208. The Rules of Procedure have been framed under Art. 208 of the Constitution. So Chapter V is controlled by other Chapters of the Rules of Prodedure. Art. 208

> "(1) A House of the Legislature of a State may make rules for regulating, subject to the provisions of this Constitution, its procedure and the conduct of its business."

(SRI M. NAGAPPA)

The other Chapters of these Rules have been framed under Art. 208(1) of the Constitution. As my learned friend said, that Rule 31 is also there. According to that the business of the House has been prepared by the Secretary. But this Rule 31 cannot control the mandatory Rule 18 and Art. 176 of the Constitution. Secondly the list of the busines cannot be decided beforehand. Unless it is placed on the Table of the House as to how many amendments have been tabled, the bussiness cannot be drawn. After taking into consideration the amendments proposed, the Speaker, in consultation with the Leader of the House, could fix time. Thereafter alone, Rules 18 and 19 will come into play.

Without knowing all these, if we allow the member to move the Motion of Thanks to the Governor's Address, we will be contravening Rule 18 of the Rules of Procedure and Art. 176 of the Constitution. Unless the Leader comes before this House and consults the Hon. Speaker and after that time is fixed for the discussion of the Motion of Thanks, the proceedings are to be suspended till then. Thereafter only the matter may be taken up. I request that the further proceedings be stopped.

One more point I wish to raise is this. My learned friend has stated that this is Government business. If we read Chapter VI, we will see that rule 27 relates to arrangement of Government business and Rule 28 to allotment of time for private members' business. Here the procedure laid down is altogether different. It is not applicabls here because it takes away the provisions or the rights given under Chapter V. It cannot be Government business. It is altogether a different business which is proposed under Chapter V. We cannot violate the mandatory rules and Article 176. I request the Leader of the House to take into consideration all the amendments that have been given and then have the time fixed by the Speaker. After that only, further proceedings should be taken for discussion of the Governor's Address. Otherwise, we will be violating the Rules of Procedure and the mandatory provisions of the Constitution.

Mr. DEPUTY SPEAKER.—After consulting the Leader of the House and also after taking the consent of the members of the Business Advisory Committee, the programme has been fixed. So, I do not think there is any point of order.

† Sri K. H. PATIL.—I am on a point of order. Rule 311 speaks at length on the point on which we have to raise a point of order. Sub-clause 5(c) says "when a question on any motion is being put to the Assembly", we are entitled to raise a point of order. The Leader of this House Sri Nijalingappa, while accepting the office, has taken Oath. He is the first servant of the State.

Mr. DEPUTY SPEAKER.—What is the point of order ?

Sri K. H. PATIL.—The point of order cannot be expressed in one word. The point of order will come at the end. First I have to explain to the House. It is not enough if I convince the Deputy Speaker.

Mr. DEPUTY SPEAKER.—There cannot be a debate on the point of order. What is the rule under which the point of order is raised ?

Sri K. H. PATIL.—I am submitting that it is not enough if I convince the good conscience of the Speaker. I must also take with me the entire House and both the sides. It is my bounden duty to do so. The point of order I am raising is under Rule 311 (5) (c)

So I rise to a point of order, under rule No. 311. Sri Nijalingappa, while taking the oath, he has said in so many words that he is not passing the confidence of the Government to anybody else. Having taken this Oath, he has occupied the position of Chief Minister of this State. As a Chief Minister of the State, he is a full paid servant of the State. Why did we require him in the House today ? Rule 18 (3) says that the time must be fixed in consultation with the Speaker, no time for discussion but the time that we are allolwed to-day. That should come only after the presentation of the Governor's Address. Today the Speaker has presented the Address and decidedly and admitedly it is not today that we have consulted the Leader. It has to come yet. The Business Advisory Committee might have considered. In all other matters, the Business Advisory Committee has power to allot time. But Rule 18 (2) comes in the way. According to that rule, the Speaker has placed a copy of the Address on the Table of House today at 1 0' clock. Immediately after that: the Speaker shall, in consultation with the Leader of the House allot time for discussion'. The framers of the rules could as well have said : in consultation with the Business Advisory Committee.'

So, if the Leader is to be consulted, he has to be consulted on what point ? That we have to consider because the opposition wants an explanation from the Leader on the issue under discussion. Are you shirking your responsibility ? The Speaker might have consulted the Leader on the phone; We have no quarrel about it. But, what is consulted is: what is the allocation of time on each paragraph. We are not responsible for any disorder in the House. An impression may be created that the opposition is creating disorder. You have a right and power to call upon the Chief Minster and summon the Chief Minister to come and convince the opposition. The hon. Deputy Speaker, asked, which rule or precedent was ignored. Sir, fortunately or unfortunately, when these rules were framed, the framers did not think that such an incident would happen. I am strengthening your hands to give a ruling. I know you are impartial but we want you to be more impartial. Therefore I am quoting instances and precedents and I am trying to strengthen your hands. What happened in Kerala when E.M.S. Namboodripad...... .....

Mr. DEPUTY SPEAKER.—I suppose the member has finished his point of Order. I will give a ruling.

Sri K. H. PATIL.—I have not finished my point of order.

Mr. DEPUTY SPEAKER.—I will give a ruling.

Sri K. H. PATIL.—Without hearing me completely, how can you give a ruling ? I agree you have a right to give a ruling and that will bind me as well as the House. At the same time I must be allowed to complete the point of order I have raised so that you may be able to know the full facts of the case.

Mr. DEPUTY SPEAKER.—I have heard the member at length. I will give a ruling.

Sri K. H. PATIL.—I submit that ruling cannot be given without the point of order being completed. There is no provision in the Rules of procedure that a ruling can be given without a point of order being completed.

With great respect I am submitting that in Kerala when Sri E. M S. Naumbocdripad was the Chairman of the Communist Pary, it was stated that he was disqualified. As a matter of fact the headquarters of Sri E. M. S. Namboodripad was there and still he was ousted. Let us come to our own State. When Sri Mohamad Ali was the President of the M.P.C.C. he was taken as a Minister and he immediately resigned the Presidentship of M.P.C.C. It is a healthy precedent envisaged by our leaders and we have nothing to say against Sri Mohamad Ali. He has done the correct thing. Therefore our submission is that our leader Sri S. Nijalinappa should also follow the same precedent. As a matter of fact immediately after his election as President of the A.I.C.C. he said that he will leave the Chief Ministership of Mysore. He is not a school boy ; he knows the responsibility. Now due to the difficulty forthcoming and due to inner feelings that if he resigns his henchmen may not be there to support him, if he goes away the State may not respect him, he thinks that he should continue here. This is the stand he has taken which is unconstitutional, illegal and contrary to all the precedents laid down not only in Mysore but in the whole of India.

One more point and that is as our elderly member Sri H. Siddaveerappa stated, in England the hon'ble Minister is not allowed even to write an article. Well his statement was contradicted by the learned friend on the other side. In England if both the positions are held by one and the same person, we shall accept it if it is good and leave it if it is bod. That is not a remunerative post in England.

Mr. DEPUTY SPEAKER.—Is it a point of order or debate ?

Sri K. H. PATIL.—Am I going out of order ?

The Chief Minister should be here. The Governor's Address is worth to be thought over. Under the Constitution the Ministry means, the Ministry headed by the Chief Minister. The Chief Minister is the leader of the House. Let us see what will be the fate if we allow this

motion of thanks to be moved without our leader being present. Though the Opposition walked out, we have read the relevant parts of the Address and we want to know whether those paras have to be thanked or not and that has to be consulted with the Leader. He may belong to a different party. But he is the Leader in the House. His salary includes my taxation also. So, the entire State is responsible to feed our leader. Why are they feeding? Very recently, thanks to Sri Kashimath Siddaiah, we placed them with higher pay. It was because he expected them to be more honest and more dutiful to the State. Sri S. R. Kanthi assured us with better performance. He said "we want to do more work for the State and that is why we want more salary." We all blessed them. But what is going on today? At the cost of public exchequer, party work is being done. I can understand if he was merely the President of M.P.C.C. Very little consideration would have been there. If for everything we say there is no rule to debar, how can the rule framers envisage that such things will happen? So, in the absence of rules we must know what is good and what are the precedents in India. The Congress has laid down precedents by coming out. When Sri Kamaraj was elected President, he resigned and came over as President.

5-30 P.M.

He being a principled man did not like to ride two horses. He preferred to ride the horse he liked and we congratulate such a principled man. We expected our leader Sri Nijalingappa also to follow that example. This House is in such a peculiar situation that we are unable to proceed with the business in the absence of our leader. Shall we approach him for transaction of any business? We are all helpless. Can he come and say that he prefers to serve Mysore State rather than be the President of the Congress, or he wants Presidentship of the Congress and does not want Chief Ministership? In the interest of democracy, in the interest of the State and in the interest of keeping the decorum of this august House, it is better to get our leader present in the House. If necessary, the Speaker may summon him and ask him to state whether he wants Chief Ministership or Presidentship of the Congress. With these words, I appeal to you, Sir, to give a decision either today or tomorrow because the time is already over.

MR. DEPUTY SPEAKER.—The point of order raised by the Learned member Sri Patil is that the provisions of rule 18 were not at all considered while fixing the business. I have already stated that those provisions were considered and after consulting the Leader of the House, the programme was fixed and before the programme was fixed, it was brought to the notice of the members of the Business Advisory Committee. So, after consulting the Leader of the Opposition and also the members of the Business Advisory Committee, the programme has been fixed. So, I am unable to uphold the point of order.

SRI N. HUTCHMASTY GOWDA.—Sir, on a point of order.

Sri S. D. KOTHAVALE.—There cannot be a point of order on the same point when the ruling has been given.

† ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. 18ನೇ ನಿಯಮದ 2ನೇ ಒಳನಿಯಮದ ಪ್ರಕಾರ ಸೆಕ್ರೆಟರಿಯವರು ಕಳುಹಿಸುವ ಕಾರ್ಯಕ್ರಮ ಪಟ್ಟಿ ಯಾವಾಗಲೂ ಕೂಡ ತಾತ್ಕಾಲಿಕವಾದುದು. ಅದನ್ನು ಕಳುಹಿಸಿದ ಮೇಲೆ ಸಭೆಯು ಪ್ರಾರಂಭವಾಗುವುದಕ್ಕೆ ಮುಂಚೆ ಬಿಸಿನೆಸ್ ಅಡ್ವೈಸರಿ ಕಮಿಟಿ ಸೇರಿ ನಿರ್ಧಾರವಾದ ಕಾರ್ಯಕ್ರಮವನ್ನು ಗೊತ್ತುಮಾಡುವುದು ಈಗಿರುವ ಪದ್ಧತಿ. ನಿನ್ನೆ 10 ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿಯ ಮೀಟಿಂಗನ್ನು ಕರೆದರು. ಆಗ ಮುಖ್ಯ ಮಂತ್ರಿಗಳಾಗಲೀ ಅಥವಾ ಲಾ ಸಚಿವರಾಗಲೀ ಮೀಟಿಂಗಿಗೆ ಬಾರದಿದ್ದುದರಿಂದ ಯಾವ ತೀರ್ಮಾನವನ್ನು ಅಲ್ಲಿ ತೆಗೆದುಕೊಳ್ಳಲಿಲ್ಲ. ಸರಕಾರದ ಅಭಿಪ್ರಾಯವನ್ನು ತಿಳಿಸುವುದಕ್ಕೆ ಅಲ್ಲಿಗೆ ಯಾವ ಮಂತ್ರಿಗಳೂ ಸಹ ಬರಲಿಲ್ಲ. ಆದುದರಿಂದ ಅಲ್ಲಿ ತೀರ್ಮಾನ ತೆಗೆದುಕೊಳ್ಳದಿರುವುದರಿಂದ ಈಗಿರುವುದು ತಾತ್ಕಾಲಿಕವಾದ ಕಾರ್ಯಕ್ರಮದ ಪಟ್ಟಿಯೇ ಹೊರತು ನಿರ್ದಿಷ್ಟವಾದ ಅಧಿಕೃತವಾದ ಕಾರ್ಯಕ್ರಮ ಪಟ್ಟಿಯಲ್ಲ. ಅಧಿಕೃತವಾದ ಕಾರ್ಯಕ್ರಮ ಪಟ್ಟಿಯಲ್ಲ. ಅಧಿಕೃತವಾದ ಪಟ್ಟಿಯ ಪ್ರಕಾರ ಈ ದಿವಸ ಕೆಲಸ ನಡೆಯುವುದಕ್ಕೆ ಸಾಧ್ಯವಾಗಿಲ್ಲ. ರೂಲ್ 18 (2) ರಲ್ಲಿ ಇದು ನಮೂದಾಗಿದೆ. ನಿರ್ದಿಷ್ಟವಾದ ಕಾರ್ಯಕ್ರಮ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಬೇಕು. ಅದಾಗುವವರೆಗೆ ಈಗಿರುವುದು ತಾತ್ಕಾಲಿಕವಾದ ಕಾರ್ಯಕ್ರಮ ಪಟ್ಟಿ. ಹಾಗಿರುವುದರಿಂದ, ಈ ದಿವಸ ಬೆಳಿಗ್ಗೆ ಅಧ್ಯಕ್ಷರು ಇದನ್ನು ತೆಗೆದುಕೊಳ್ಳುವುದಕ್ಕೆ ಅನುಮತಿ ಕೊಡದಿದ್ದರೂ ಅವರು ಈಗ ನಡೆಯುತ್ತಿರುವ ಚರ್ಚೆಗೆ ಬಹಳ ಮಟ್ಟಿಗೆ ಒಪ್ಪಿಗೆ ಕೊಟ್ಟಿದ್ದಾರೆಂದು ನಾನು ಊಹಿಸುತ್ತೇನೆ ಆದಕಾರಣ ಚರ್ಚೆ ಮಾಡಬೇಕಾಯಿತು. ಬಿಸಿನೆಸ್ ಅಡ್ವೈಸರಿ ಕಮಿಟಿ ತೀರ್ಮಾನ ಮಾಡುವವರೆಗೆ ಈಗ ನಡೆಯುತ್ತಿರುವ ಕಾರ್ಯಕ್ರಮ ಮುಂದುವರೆಯುವುದು ರೂಲ್ಸಿಗೆ ಅನುಗುಣವಾಗಿದೆ. ಆದುದರಿಂದ ಈ ಚರ್ಚೆ ಮುಂದುವರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕ್ರಿಯಾಲೋಪವನ್ನು ಸೂಚಿಸುತ್ತೇನೆ.

ಉಪಾಧ್ಯಕ್ಷರು.—ಈ ಚರ್ಚೆ ಮುಂದುವರೆಯುವುದಕ್ಕೆ ಯಾವ ರೂಲಿನ ಪ್ರಕಾರ ಅವಕಾಶವಿದೆ ಎಂಬುದನ್ನು ಹೇಳಿ. ಒಂದು ಮೋಷನ್ ಮೂವ್ ಮಾಡಿದರೆ ಅವಕಾಶ ಕೊಡುವುದನ್ನು ಯೋಚನೆ ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈ ದಿವಸ ನಡೆಯುತ್ತಿರುವ ಚರ್ಚೆಯ ಗಂಭೀರತೆಯೆಷ್ಟು ಎಂಬುದನ್ನು ತಾವು ಅರ್ಥ ಮಾಡಿಕೊಂಡಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ. ಕಾಲವೆಲ್ಲಾ ಅಪವ್ಯಯವಾಯಿತೆಂದು ಹೇಳಿದಿರಿ. ಈ ಸಂಬಂಧದಲ್ಲಿ ನಮ್ಮ ಮೇಲೆ ಮಾತ್ರವಲ್ಲ, ನಿಮ್ಮ ಮೇಲೂ ಕೂಡ ಆರೋಪಣೆ ಇದೆಯೆಂಬುದನ್ನು ತಿಳಿಯಬೇಕು. ತಾವು ಇಂದು ನಡೆಯುತ್ತಿರುವ ಚರ್ಚೆಗೆ ಸರಿಯಾದ ಅವಕಾಶವನ್ನು ಕೊಡುವುದನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ. ಈಗಾಗಲೆ ಶ್ರೀಮಾನ್ ಕೆ. ಎಚ್. ಪಾಟೀಲರು ಮತ್ತು ನಾಗಪ್ಪನವರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ, ಆದರ ಜೊತೆಗೆ ರೂಲ್ 18 ರ ಒಳನಿಯಮದ ಪ್ರಕಾರ ಬಿಸಿನೆಸ್ ಅಡ್ವೈಸರಿ ಕಮಿಟಿಯ ತೀರ್ಮಾನವಾಗದಿರುವಾಗ ನಮ್ಮ ಮುಂದೆ ಅಧಿಕೃತವಾದ ಕಾರ್ಯಕ್ರಮ ಇರುವುದಕ್ಕೇ ಸಾಧ್ಯವಿಲ್ಲ. ಆದುದರಿಂದ ಆ ತೀರ್ಮಾನವಾಗುವವರೆಗೆ ಈ ಚರ್ಚೆ ಮಾಡುವುದಕ್ಕೆ ರೂಲ್ಸ್ ವಿರೋಧವಾಗುವುದಿಲ್ಲ. ಈ ಚರ್ಚೆ ಮಾಡುವುದಕ್ಕೆ ಎಷ್ಟು ಕಾಲಾವಕಾಶ ಕೊಡಬೇಕೆಂಬುದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನ ಮಾಡೋಣ. ಇದೇನೂ ಹೊಸದಲ್ಲ, ಇಂಥ ಪ್ರಸಂಗ 1967 ರ ಚುನಾವಣೆ ನಡೆದಮೇಲೆ ಎಷ್ಟೋ ಸಲ ಬಂದಿದೆ, ಅದು ತಮ್ಮ ಗಮನದಲ್ಲೂ ಇದೆ, ಸಭೆಯ ಗಮನದಲ್ಲೂ ಇದೆ. ಆದುದರಿಂದ ಈ ಚರ್ಚೆ ಪೂರ್ಣವಾಗುವವರೆಗೆ ಅವಕಾಶ ಕೊಡಬೇಕು, ಕಾಲವನ್ನು ಮೊಟಕುಮಾಡುವುದು ಸೂಕ್ತವಲ್ಲ ಎಂದು ನಮ್ರತೆಯಿಂದ ಹೇಳುತ್ತೇನೆ.

ಉಪಾಧ್ಯಕ್ಷರು.—ಯಾವ ರೂಲ್ ಪ್ರಕಾರ ಅವಕಾಶವಿದೆಯೆಂಬುದನ್ನು ಹೇಳಿ.

Sri S. D. KOTHAVALE.—I rise to a Point of Order. Sir, an incorrect statement has been made by my friend Sri Huchmasthy Gowda. Yesterday, the Business Advisory Committee had met, there was quorum and a decision was taken that the discussion on the Motion of Thanks should be taken up today.

Sri H. SIDDAVEERAPPA.—You played Hamlet without the Princ of Denmark!

Sri K. H. PATIL.—Sir, I rise to a Point of Order regarding the maintainability of the opinion to be expressed by the hon'ble friend, Sri Kothawale.

Sri S. D. KOTHAVALE.—There was a meeting of the Business Advisory Committee and a decision was taken that six days should be allotted for the discussion on the Motion of Thanks. The Committee consists of a number of persons.

Sri S. SIVAPPA.—My friend is an elderly person. I want to know whether what happened in the Bnsiness Advisory Committee can be disclosed ?

Sri S. D. KOTHAVALE.—The decisions of the Business Advisory Committee can be disclosed without offending any Rule. The decision was that six days should be allotted for discussion on the Motion of Thanks.

The other point raised was whether the Chief Minister or any Government representative was present. There is no rule that Government representative should be present at all. It is enough if there is quorum, and the decision taken by the Business Advisory Committee is binding on us, even if the Government representative was present or not. Under Rule 18, it only enjoins the consultation of the Leader. Want of consultation does not invalidate the allotment of time. It is not unconstitutional. Since the Hon'ble Speaker has fixed it, the presumption is that he fixed it in consultation with the Leader of the House. His physical presence is not required. Even before laying the speech of the Governor on the Table of the House, he can consult the Leader of the House and fix the time. The presumption is that it is done. Therefore, all that appears to me is, we are wasting the time of the House and we are unnecessarily spending the money of the poor people by wasting time. If my learned brothers opposite have got any small iota of sympathy for the poverty of the people, they would not behave like this. I request them to utilise the time properly. If they want let them move an Adjournment Motion tomorrow in a proper way and discuss. With due respects to my friends, I feel sorry that we are wasting public money without transacting any business. It is very clear that none of the members on this side have spoken. Unless there is some proposition before the House there cannot be a debate. If they want a reply from the Chief Minister, they cannot get it this way. There should not be a sort of views of majority on the one side and neither on the other ; should there be a tyranny of the minority ? Let me be pardoned for saying that they are obstructing the lawful and regular work of the Assembly. It is not proper, They will have to answer the public also tomorrow.

(*Interruption by many members*)

Sri B. P. GANGADHAR.—I want to know whether the hon'ble member is speaking on a Point of Order ? He is giving a sermon !

Sri S. D. KOTHAVALE.—The Point of Order is this. They want certain explanation from the Chief Minister or from the Government side. For that, there must be some Motion or some proposition should be put according to the rules. In the absence of that, no explanation can be given or can be sought. This is a simple matter. I don't think the point raised by them deserve any consideration. Let there be a proper Motion or proposition. In the absence of that Motion, my request is, let us behave in a democratic manner. It is a question of debate. This is how the matter should go. It is not by way of having tactics which obstructs the work of the House. In the absence of this particular Motion, this should not be allowed and the regular work as per agenda should proceed.

Sri B. P. GANGADHAR.—Sir, no dialatory tactics have been exercised by us. I want to know whether Sri Kothavale knows the meaning of the word 'tactics'. I oppose the use of that word, and it is unparliamentary. It must be expunged.

ಶ್ರೀ ಎಸ್. ಗೋಪಾಲಗೌಡ.—ಸ್ವಾಮಿ, ಕೋಠಾವಳೆಯವರು ಮಾತನಾಡದೇ ಇದ್ದಿದ್ದರೆ ನಾನು ಪುನಃ ಮಾತನಾಡುತ್ತಾ ಇರಲಿಲ್ಲ.

Mr. DEPUTY SPEAKER.—I must give a Ruling on the Point of Order raised. The Point of Order raised by the learned hon'ble member Sri Kothawale is that in the absence of any Motion, discussion should not be allowed. He is right in raising this Point of Order. The Rules of Procedure...

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿವೆ ಎಂದು ಹೇಳಿದರು, ಹಾಗಿದ್ದರೆ ಆ ರಿಪೋರ್ಟು ನಮ್ಮ ಮುಂದೆ ಇರಬೇಕೇ ಬೇಡವೇ? ಅದು ನಮ್ಮ ಮುಂದೆ ಇಲ್ಲದೇ ಇರುವುದರಿಂದ ಆ ರೀತಿ ತೀರ್ಮಾನವಾಗಿಲ್ಲ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

Mr. DEPUTY SPEAKER.—In the absence of any motion it, cannot be.........

ಶ್ರೀ ಎಸ್. ಶಿವಪ್ಪ.—ಶ್ರೀಮಾನ್ ಕೋಥಾವಲೆ ಅವರು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಏನು ಇಷ್ಯೂ ರೈಸ್ ಆಯಿತು ಅನ್ನುವುದನ್ನು ಅವರು ಆಲೋಚನೆ ಮಾಡಿಲ್ಲ. We are interested in the dignity of the House. There should not be misunderstanding.

Mr. DEPUTY SPEAKER.—In the absense of any motion, can we allow the discussion.

ಶ್ರೀ ಎಸ್. ಗೋಪಾಲಗೌಡ.—ಈ ಹೊತ್ತು ನಾವು ಏನು ಒಂದು ತಕ್ಷವನ್ನು ಎತ್ತಿಹಿಡಿಯಲು ಹೊರಟಿದ್ದೇವೆಂಬುದನ್ನು ತಾವೆಲ್ಲರೂ ಒಪ್ಪತಕ್ಕದ್ದಾಗಿದೆ. ಆದರೆ ಅದರ ಬಗ್ಗೆ ನಾವು ಒಂದು ಕ್ರಮಬದ್ಧವಾದ ಮೋಷನ್ ತಂದು ಅದನ್ನ ಚರ್ಚೆ ಮಾಡಬೇಕೆಂದೂ, ಹಾಗೆ ಅದನ್ನು ತಾರದೆ ಇಲ್ಲಿ ಚರ್ಚೆ ನಡೆಸುವುದಕ್ಕೆ ಅವಕಾಶವಿಲ್ಲ ಎಂದು ತಾವು ಹೇಳುತ್ತಿದ್ದೀರಿ. ಆದರೆ ಈ ಹಿಂದೆ ಹಾಗೆ ಒಂದು ಮೋಷನ್ ತಾರದೆಯೆ ಎಷ್ಟೋ ಚರ್ಚೆಗಳನ್ನು ಇಲ್ಲಿ ನಡೆಸಿದ್ದೇವೆ. ನಾವು ಈ ಹಿಂದೆ ಇದೇ ಸಭೆಯಲ್ಲಿ ಒಂದೇ ಒಂದು ವಿಚಾರವನ್ನು ಐದು ದಿವಸಗಳವರೆಗೂ ಚರ್ಚೆ ಮಾಡಿದ್ದೇವೆ. ಆದರೆ ನಮ್ಮ ಪಕ್ಷದವರು ಮಾತನಾಡುತ್ತಿದ್ದಾಗ ಅತ್ತಕಡೆ ಇರತಕ್ಕ ಶ್ರೀ ಕೋಥಾವಳೆ ಅವರು ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿರುವುದರಿಂದ ಅವರು ಏನೋ ಒಂದು ಅಲ್ಲಿ ನಡೆದಿರತಕ್ಕ ನ್ಯಾಯವಾದ ವಿಚಾರವನ್ನು ತಿಳಿಸುತ್ತಾರೆಂದು ನಾನು ತಿಳಿದಿದ್ದೆ. ಶ್ರೀಮಾನ್ ಹುಚ್ಚಮಾಸ್ತಿ ಗೌಡರು............

ಶ್ರೀ ಎಸ್. ಡಿ. ಕೋಥಾವಳೆ.—ಆ ಮೀಟಿಂಗಿನಲ್ಲಿ ಈ ಗೌರ್ನರ್ ಅವರ ಭಾಷಣದ ಬಗ್ಗೆ ಚರ್ಚೆ ಬಂದಾಗ ತಾವೆಲ್ಲರೂ ಹೇಗೆ ನಡೆಯಬೇಕು ಎನ್ನತಕ್ಕ ವಿಚಾರ ಚರ್ಚೆಯಾಗಿ ನಮ್ಮ ಪಕ್ಷದವರು ಒಬ್ಬರು ಮಾತನಾಡಿದ ಮೇಲೆ, ವಿರೋಧ ಪಕ್ಷದವರ ಕಡೆಯಿಂದ ಒಬ್ಬರು ಹೀಗೆ ಮಾತನಾಡುವುದಕ್ಕೆ ಅವಕಾಶವಿರಬೇಕು ಎಂದು ಚರ್ಚೆ ಆಗಿ ಅದಕ್ಕೆ ತಾವೆಲ್ಲರೂ ಒಪ್ಪಿಕೊಂಡಿದ್ದೀರಿ............

Sri H. SIDDAVEERAPPA.—Opinion has been expressed for which the Leader of the Party is not there.

Sri S. D. KOTHAVALE.—In his absence can we sit and discuss

Sri H. SIDDAVEERAPPA.—May I know whether there is Leader or not ?

Sri K. H. PATIL.—As one of the members of the Panel, Sri Kothavale has presided over the session. As far as we know, the Speaker and the Deputy Speaker are impart al, though they belong to ruling Party. They have made their position very clear. Mr. Kothavale has expressed that a motion has to be moved for taking up discussion in the matter. He has expressed this as if he is giving the ruling because he is one of the members of the panel. He has expressed his mind in this connection. It is not a point of order as has been said now.

ಶ್ರೀ ಎಸ್. ಗೋಪಾಲಗೌಡ.—ಅಧ್ಯಕ್ಷರೇ, ನಾನು ತಮ್ಮಲ್ಲಿ ಒಂದು ವಿಷಯವನ್ನು ಅರಿಕೆ ಮಾಡಿಕೊಳ್ಳಬೇಕಾಗಿದೆ—ಶ್ರೀಮಾನ್ ಕೊಥಾವಳೆಯವರು ಬಿಜಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಒಬ್ಬ ಸದಸ್ಯರೇನೋ ಹೌದು. ಆದರೆ ಅವರು ಆ ಬಿಸಿನೆಸ್ ಅಡ್ವೈಜರಿ ಕಮಿಟಿಯಲ್ಲಿ ಏನು ವಿಷಯ ಚರ್ಚೆಗೆ ಬರಲಿಲ್ಲವೋ ಅದನ್ನೀಗ ಈ ಸಭೆಯಲ್ಲಿ ಹೇಳುವುದಕ್ಕೆ ಹೊರಟಿದ್ದಾರೆ. ಅದು ಸರಿಯೇ? ನಾವೀ ದಿವಸ ಇಲ್ಲಿ ಚರ್ಚೆಮಾಡುತ್ತಿರುವುದು ಆ ಬಿಸಿನೆಸ್ ಅಡ್ವೈಜರಿಯ ಕಮಿಟಿಯಲ್ಲಿ ಏನು ಚರ್ಚೆ ನಡೆಯಿತು ಎಂಬುದನ್ನು ಪ್ರಶ್ನೆಮಾಡುತ್ತಿಲ್ಲ. ನಾವು ಈ ದಿವಸ ಇಲ್ಲಿ ಚರ್ಚೆ ಮಾಡುತ್ತಿರುವುದು ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿರತಕ್ಕವರು ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಅಧ್ಯಕ್ಷರಾಗಿರುವುದರಿಂದ ನಮ್ಮ ರಾಜ್ಯದ ಹಿತಕ್ಕೆ ಧಕ್ಕೆ ಬಂದಿದೆ; ಆದಕಾರಣ ಅವರು ಈ ವಿಚಾರದಲ್ಲಿ ಒಂದು ಹೇಳಿಕೆಯನ್ನು ಕೊಡಬೇಕು ಅನ್ನುವುದು ಈಗಿಲ್ಲಿ ಚರ್ಚೆಯಾಗುತ್ತಿರುವ ವಿಚಾರ. ಹಾಗೆ ಅವರು ತಮ್ಮ ಒಂದು ಹೇಳಿಕೆಯನ್ನು ಕೊಡುವ ತನಕ ಈ ಸಭೆಯ ಕಾರ್ಯಕಲಾಪಗಳನ್ನು ಮುಂದುವರಿಸುವುದು ಸರಿಯಾದ್ದಲ್ಲ ಅನ್ನುವ ಒಂದು ವಿಷಯ ನಮ್ಮನ್ನು ವಿವೇಚನೆಗೊಳಗು ಮಾಡಿದೆ. ಆದರೆ ಈ ಸಂದರ್ಭದಲ್ಲಿ ಶ್ರೀ ಕೋಥಾವಳೆಯವರು ತಮ್ಮ ಹದ್ದು ಮೀರಿ ಮಾತನಾಡಿದ್ದಾರೆ. ನಿಜವಾಗಿಯೂ ಈ ಸಭೆಯ ಕಾಲವನ್ನು ಅಪವ್ಯಯ ಮಾಡಬೇಕೆಂಬ ಉದ್ದೇಶ ನಮಗಿಲ್ಲ. ಈ ಸಭೆಯ ಕಾರ್ಯಕಲಾಪಗಳನ್ನು ಎಷ್ಟು ಸುಲಲಿತವಾಗಿ ಮುಂದುವರಿಸೋಣ ಅನ್ನುವ ಆಸೆ ಎಷ್ಟು ತಮಗಿದೆಯೋ ಅಷ್ಟೇ ಆಸೆ ಆಕಾಂಕ್ಷೆಗಳು ನಮಗೂ ಇವೆ.........

ಶ್ರೀ ಎಸ್. ಡಿ. ಕೋಥಾವಳೆ.—ಆದರೆ ಇದು ಸರಿಯಾದ ಪದ್ಧತಿಯಲ್ಲ. ತಾವು ಈ ಬಗ್ಗೆ ಒಂದು ಅಡ್‌ಜರ್ನ್‌ಮೆಂಟ್ ಮೋಷನ್ ತನ್ನಿ, ತಂದು ಚರ್ಚೆ ಮಾಡಿ ಯಾರು ಬೇಡವೆನ್ನುತ್ತಾರೆ ?

ಶ್ರೀ ಎಸ್. ಗೊಪಾಲಗೌಡ.—ನಾವು ತರುವುದಕ್ಕೆ ತಯಾರಿದ್ದೇವೆ. ತಾವೂ ಈ ಚರ್ಚೆಯಲ್ಲಿ ಭಾಗವಹಿಸಬಹುದು. ಅಂದರೆ ತಾವೇ ಒಂದು ಈ ವಿಚಾರದಲ್ಲಿ ಸಬ್‌ಸ್ಟ್ಯಾನ್ಟೀವ್ ಮೋಷನ್ ತರಬಹುದು, ತನ್ನಿ ತಮಗೇನು ಆ ಮನಸ್ಸು ಇಲ್ಲವೇ ?

ಶ್ರೀ ಎಸ್.ಡಿ. ಕೋಥಾವಳೆ.—ಅದಕ್ಕೆ ಒಂದು ಪ್ರೊಸೀಜರ್ ಇದೆ. ಅದನ್ನು ಅನುಸರಿಸೋಣ ಎಂಬುದಾಗಿ ನಾನು ತಮಗೆ ತಿಳಿಸಿದೆ, ಅಷ್ಟೇ.

ಶ್ರೀ ಎಸ್. ಗೋಪಾಲಗೌಡ.—ಈ ಸಭೆಯಲ್ಲಿ ಏನೊಂದು ನಿಯಮವನ್ನು ಅನುಸರಿಸುತ್ತಾ ಬಂದಿದ್ದೇವೆ ಎಂದರೆ–ನಾನು ಮಾತನಾಡುವುವಕ್ಕೆ ಎದ್ದು ನಿಂತರೆ ಅದಕ್ಕೆ ಅಧ್ಯಕ್ಷರು ಅನುಮತಿ ಇತ್ತಿದ್ದಾರೆ ಎಂದು ಅದರ ಅರ್ಥ. ಹಾಗೆ ಅನುಮತಿ ಪಡೆದು ಮಾತನಾಡಿದ ಮೇಲೆ, ಆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದು, ಅದರ ಪರವಾಗಿ ಅಗತ್ಯ ಕಂಡು ಬಂದರೆ ಒಂದು ಕ್ರಮಬದ್ಧವಾದ ಸೂಚನೆಯನ್ನು ತಂದು ಆ ನಂತರ ಅದರ ಬಗ್ಗೆ ಸದಸ್ಯರ ಮತವನ್ನು ಪಡೆಯಲಾಗುವುದು.

ಶ್ರೀ ಎಚ್. ಸಿದ್ಧವೀರಪ್ಪ.—ಮಹಾಜನ್ ಕಮಿಟಿಯ ವರದಿಯ ಬಗ್ಗೆ ಒಂದು ಸಬ್‌ಸ್ಟ್ಯಾಂಟೀವ್ ಮೋಷನ್ ಇಲ್ಲದೆ ಚರ್ಚೆ ನಡೆಯಲಿಲ್ಲವೇ ?

ಶ್ರೀ ಎಸ್. ಗೋಪಾಲಗೌಡ.—ನಾವೀ ದಿವಸ ಇಲ್ಲಿ ವ್ಯಕ್ತಪಡಿಸುತ್ತಿರುವುದು ಬಹಳ ಗಂಭೀರ ವಾದ ವಿಷಯ. ಈ ಮಾನ್ಯ ಸಭೆಯ ಕಾಲವನ್ನು ಹರಣಮಾಡಬೇಕೆಂಬ ಇಚ್ಛೆ ಯಾರಿಗೂ ಇಲ್ಲ. ಈ ದಿವಸ ಕಾಂಗ್ರೆಸ್ ಪಕ್ಷದವರು ನಮ್ಮ ಪ್ರಶ್ನೆಗೆ ಸರಿಯಾದ ಒಂದು ಉತ್ತರವನ್ನು ಒದಗಿಸಿಕೊಡಬೇಕು, ಇದು ರಾಜ್ಯದ ಜನರ ಬೇಡಿಕೆ. ಇದನ್ನು ಅವರು ಈಡೇರಿಸಲೇಬೇಕು. ಈ ದಿವಸ ನಾವು ಇಲ್ಲಿ ನಡೆಸುತ್ತಿರುವ ಚರ್ಚೆ ನಿಯಮ ನಿಬಂಧನೆಗಳಿಗೆ ಹೊರಗಡೆ ಇದೆಯೆಂಬುದಾಗಿ ನಾವು ತಿಳಿದಿಲ್ಲ. ನಾವು ಇಲ್ಲಿ ಕೇಳುತ್ತಿರುವ ವಿಚಾರವನ್ನು ಕೈ ಬಿಟ್ಟು ಅನಗತ್ಯವಾದ ವಿಷಯವನ್ನು ಎತ್ತಿದ್ದಾರೆ ಶ್ರೀಮಾನ್ ಕೊಥಾವಳೆ ಅವರು. ಆದ್ದರಿಂದ ಶ್ರೀಮಾನ್ ಕೊಥಾವಳೆ ಅವರ ಅಭಿಪ್ರಾಯವನ್ನು ನಾವು ವಿರೋಧಿಸುತ್ತೇವೆ ತಾವು ನಮ್ಮ ಬೇಡಿಕೆಗೆ ಒಂದು ರೂಪ ಕೊಟ್ಟು ಸರ್ಕಾರದಿಂದ ಉತ್ತರವನ್ನು ಜಾಗ್ರತೆಯಾಗಿ ಕೊಡಿಸಬೇಕೆಂದು ನಾನು ಹೇಳುತ್ತೇನೆ.

6–00 P.M.

ಶ್ರೀ ಟಿ. ಆರ್. ಶಾಮಣ್ಣ (ಫೋರ್ಟ್).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಒಂದು ಮೂಲಭೂತವಾದ ಪ್ರಶ್ನೆ ಇದೆ. ಅದನ್ನು ನಮ್ಮ ವಿರೋಧಪಕ್ಷದ ನಾಯಕರು ಸಭೆಯಮುಂದೆ ಇಟ್ಟರು. ಮುಖ್ಯವಾಗಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಈ ಮೂಲಭೂತವಾದ ಪ್ರಶ್ನೆಯಮೇಲೆ ಚರ್ಚೆಯಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಹೇಳಿರತಕ್ಕ ಅನೇಕ ವಿಷಯಗಳನ್ನು ಮುಂದೆ ನಮ್ಮ ನಾಯಕರಾಗಿರುವವರು ದೇಶದ ಹಿತ ದೃಷ್ಟಿಯಿಂದ ಪರಿಶೀಲಿಸುತ್ತಾರೆ. ಅವರು ಮುಖ್ಯಮಂತ್ರಿಗಳಾಗಿ ಮುಂದುವರಿಯುವುದಾದರೆ ಆಗಲಿ. ಆಗ ಇದರ ಬಗ್ಗೆ ಚರ್ಚೆ ತೆಗೆದುಕೊಳ್ಳೋಣವೆಂಬುದಾಗಿ ಒಂದು ಮೂಲಭೂತವಾದ ಪ್ರಶ್ನೆಯನ್ನು ಇಟ್ಟರು. ಈಗ ಈ ಮೂಲಭೂತವಾದ ಪ್ರಶ್ನೆಯ ಬಗ್ಗೆ ಈ ಸಭೆಯ ಮುಂದೆ ಚರ್ಚೆಯಾಗುತ್ತಿರುವಾಗ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ತೆಗೆದುಕೊಳ್ಳುವುದು ನ್ಯಾಯವಲ್ಲ. ಮಾನ್ಯ ಶ್ರೀ ನಿಜಲಿಂಗಪ್ಪನವರು ಈ ದೇಶದ ಮುಖ್ಯ ಮಂತ್ರಿಗಳಾಗಿಯೂ ಕಾಂಗ್ರೆಸ್ ಅಧ್ಯಕ್ಷರಾಗಿ ಎರಡನ್ನೂ ಯಾವ ರೀತಿಯಲ್ಲಿ ನೋಡಿಕೊಂಡು ಹೋಗುತ್ತಾರೆಂಬ ಬಗ್ಗೆ ಈ ದೇಶದ ಹಿತ ದೃಷ್ಟಿಯಿಂದ ತೀರ್ಮಾನವಾದಮೇಲೆ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ತೆಗೆದುಕೊಳ್ಳಬೇಕು. ಮುಖ್ಯ ಮಂತ್ರಿಗಳು ನಾಳೆ ದಿವಸ ಇಲ್ಲಿಗೆ ಬರುತ್ತಾರೆ. ಅವರು ಗಂಟು, ನಂಟು ಎರಡನ್ನೂ ಯಾವ ರೀತಿಯಲ್ಲಿ ಉಳಿಸುತ್ತಾರೆಂಬ ಬಗ್ಗೆ ಇಲ್ಲಿ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಆ ತೀರ್ಮಾನವಾಗುವವರೆಗೂ ರಾಜ್ಯಪಾಲರ ಭಾಷಣದ ಚರ್ಚೆ ತೆಗೆದುಕೊಳ್ಳುವುದು ಸರಿಯಲ್ಲ. ಇದು ಸಮಂಜಸವಾದುದು ಮತ್ತು ನ್ಯಾಯವಾದುದು. ಆದ್ದರಿಂದ ಅಧ್ಯಕ್ಷರಲ್ಲಿ ನನ್ನ ಬೇಡಿಕೆ ಏನೆಂದರೆ, ನಾಳೆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬಂದು ನಮ್ಮ ಬೇಡಿಕೆಯ ಬಗ್ಗೆ ಸಮಂಜಸವಾದ ಉತ್ತರವನ್ನು ಕೊಟ್ಟ ನಂತರ ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ತೆಗೆದು ಕೊಳ್ಳಬೇಕೆಂದು ನಾನು ಮನವಿಮಾಡುತ್ತೇನೆ.

Mr. DEPUTY SPEAKER.—The House will now rise and meet tomorrow at 1 P.M.

The House adjourned at Three Minutes past Six of the Clock to meet at One of the Clock on Wednesday, the 21st February 1968.

WD 10029—GPB—600—30-3-1968